ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ – 582 101
**Raitha Bhavana, General Cariappa Circle, Gadag – 582 101**
*Regional Office: Grameenabhivrudhi Bhavan, Ananda Rao Circle, Bengaluru-560 009*
**E-mail: ksrdpru@gmail.com** **Phone: 08372-230338**

---

ದಿನಾಂಕ 23-12-2020 ಬುಧವಾರದಂದು ಬೆಳಗ್ಗೆ 11.00 ಘಂಟೆಗೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ರೈತ ಭವನ ಕಟ್ಟಡದಲ್ಲಿ ಮತ್ತು **'Zoom'** ಆನಲೈನ್ ಮೀಟಿಂಗ್ **App** ನಲ್ಲಿ ಜರುಗಿದ ೫ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳು.

**PROCEEDINGS OF THE FIFTH MEETING OF THE EXECUTIVE COUNCIL HELD ON 12-12-2020 AT 11.00 AM, AT RAITH BHAVAN KSRDPR UNIVERSITY GADAG AND THROUGH 'ZOOM' ONLINE MEETING APP.**

**MEMBERS PRESENT:**

| | | |
|---|---|---|
| 1 | Prof. Vishnukant. S. Chatpalli<br>Vice Chancellor,KSRDPRU | Chairperson |
| 2 | Prof. Dr. R.S. Deshpande<br>Former Director, Institute for Social and Economic Change<br>No. 405, 5th Main, 10th Cross, Teachers' Colony, Nagarabhavi, Bengaluru-72. | Member |
| 3 | Prof. T.V. Kattimani<br>Vice Chancellor, Central Tribal University<br>Vijaynagaram, Andhra Pradesh. | Member |
| 4 | Dr. S. Rajendra Prasad<br>The Vice Chancellor<br>University of Agricultural Sciences, Bengaluru | Member |
| 5 | Dr. Arun R. Patil<br>Adhiti Adhyapakara agara, Hulkoti. | Member |
| 6 | Shri Abdul Hakim,<br>Social Worker, Educationist and Writer,<br># 3078, 1st Cross, Gayathrinagar, Bengaluru-21. | Member |
| 7 | Dr. Prakash Bhat,<br>Former C.E.O., Society for Community Participation and Empowerment (SCOPE), No.19, Bayalu,<br>Hoysala Nagar, Haliyala Road, Dharwad-580 003. | Member |

| | | |
|---|---|---|
| 8 | Shri B.G. Govindappa, Ex-MLA,<br>Belaguru Village & Post,<br>Srirampura Hobli, Hosadugra – 577 527. | Member |
| 9 | Shri G. B. Shivaraj,<br>Vice-President, Gandhi Bhavan,<br>#181, Lakshmi Nivas, 2nd B Main Road, 6th Cross,<br>9th Block, Nagarbhavi 2nd Stage, Bengaluru-72. | Member |
| 10 | Prof .B. L. Lakkannavar<br>Registrar, KSRDPRU | Ex-officio Member-Secretary |

**Leave of Absence:**

1 Smt. N. Jamuna Urs,
Home Scientist (Retd.), J.S.S. KVK, Mysuru,
# 904/7, 3rd Main Road, 1st Cross,
Vidyaranyapuram, Mysuru-570 008.

2 Prof. Dr. K. M. Hanumantharayappa,
Principal & Dean, Faculty of Law (Retd.) and
Former Member, Karnataka State Law
Commission Presently residing in Guntur, A.P.

3 Vice Chancellor, VTU, Belagavi.

4 Principal Secretary to Government,
RDPR Department, Govt. of Karnataka,
Bengaluru

5 Principal Secretary to Government,
Health Department, Govt. of Karnataka,
Bengaluru.

6 Principal Secretary to Government,
Social Welfare Department, Govt. of Karnataka,
Bengaluru).

7 The Principal Secretary to Government,
Department of Agriculture, Govt. of Karnataka,
Bengaluru.

8 The Principal Secretary to Government,
Labour Department, Govt. of Karnataka,
Bengaluru

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ಸಮ್ಮುಖದಲ್ಲಿ ವಿಶ್ವವಿದ್ಯಾಲಯದ ರೈತ ಭವನದಲ್ಲಿ ಉಪಸ್ಥಿತರಿದ್ದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ಶ್ರೀ. ಅಬ್ದುಲ್ ಹಕೀಮ್ ಇವರು ವಿಶ್ವವಿದ್ಯಾಲಯದ ೨೦೨೧ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ನಂತರ ಕುಲಸಚಿವರಾದ ಪ್ರೊ. ಬಸವರಾಜ ಲಕ್ಕಣ್ಣನವರ ಎಲ್ಲ ಸದಸ್ಯರನ್ನು ಕಾರ್ಯನಿರ್ವಾಹಕ ಪರಿಷತ್ತಿನ 6ನೇ ಸಭೆಗೆ ಆತ್ಮೀಯವಾಗಿ ಸ್ವಾಗತಿಸುತ್ತಾ ಸದರಿ ಸಭೆಯ ಎಲ್ಲ ಸದಸ್ಯರು, ತಮ್ಮ ಅಮೂಲ್ಯವಾದ ಸಮಯವನ್ನು ನೀಡಿ, ಸಭೆಗೆ ಹಾಜರಾಗಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಕುಲಪತಿಗಳು ಮಾತನಾಡುತ್ತಾ ಸದರಿ ಸಭೆಯನ್ನು offline ನಲ್ಲಿ ಎಲ್ಲ ಸದಸ್ಯರ ಸಮ್ಮುಖದಲ್ಲಿ ಮುಖಾಮುಖಿ ಭೇಟಿಯಾಗಿ ಮಾಡಬೇಕಿತ್ತು ಆದರೆ ಕೆಲವು ಸದಸ್ಯರು ಪ್ರಯಾಣ ಮಾಡಲು ಅನಾನೂಕೂಲವಾಗಿರುವದಾಗಿ ತಿಳಿಸದ್ದರಿಂದ offline ಮತ್ತು online ಎರಡರಲ್ಲು ಹಮ್ಮಿಕೊಳ್ಳಬೇಕಾಯಿತು.ಮುಂದಿನ ದಿನಗಳಲ್ಲಿ offline ನಲ್ಲಿ ಸಭೆಯನ್ನು ಮಾಡುವ ಆಶಯವನ್ನು ವ್ಯಕ್ತಪಡಿಸಲಾಯಿತು.

ಮುಂದುವರೆದು ಕುಲಪತಿಗಳು ಸಂಕ್ಷಿಪ್ತವಾಗಿ 6 ತಿಂಗಳ ಶೈಕ್ಷಣಿಕ ಹಾಗೂ ವಿಸ್ತರಣಾ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಡಿಸೆಂಬರ್ 19, 2020 ರಂದು ಪ್ರಧಾನ ಕಾರ್ಯದರ್ಶಿಗಳು ಭೇಟಿ ನೀಡಿ ಅವಲೋಕನ ಮಾಡಿ ಮೆಚ್ಚುಗೆ ವ್ಯಕ್ತ ಪಡಿಸಿದ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಿಗೆ ತಿಳಿಸಿದರು, ಕೋವಿಡ್ 19 ಪರಿಸ್ಥಿತಿಯಲ್ಲಿ ಶೈಕ್ಷಣಿಕ ತರಗತಿಗಳನ್ನು ಪ್ರಾರಂಭಿಸುವ ಮೊದಲು ಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ಮಾಡಲಾಯಿತು. ಸದರಿ ಪರೀಕ್ಷೆಯಲ್ಲಿ ಎಲ್ಲರ ವರದಿ ನೆಗಟಿವ್ ಬಂದಿರುವದು ಸಂತಸದ ವಿಷಯ ಎಂದು ಸಭೆಗೆ ತಿಳಿಸಿದರು.

ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ 1: ದಿನಾಂಕ 28-08-2020 ರಂದು ಜರುಗಿದ 5ನೇ ಕಾರ್ಯನಿರ್ವಾಹಕ ಪರಿಷತ್ತಿನ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 28-08-2020 ರಂದು ಜರುಗಿದ 5ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡಾವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ.

:: ನಿರ್ಣಯ::

**ದಿನಾಂಕ 28-08-2020 ರಂದು ಜರುಗಿದ 5ನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡವಳಿಗೆ ಸದಸ್ಯರಿಂದ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಿಸಲಾಯಿತು.**

**ವಿಷಯ ಸಂಖ್ಯೆ 2: ದಿನಾಂಕ 28-08-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಐದನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 28-08-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಐದನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಮಾನ್ಯ ಕುಸಚಿವರು ಅನುಸರಣಾ ವರದಿ ಮಂಡಿಸಿದರು. ಮಾನ್ಯ ಕುಲಪತಿಗಳು ಐದನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಾನುಸಾರ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯು ಅನುಸರಣಾ ವರದಿಯನ್ನು ಗಮನಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 3: ದಿನಾಂಕ 29-09-2020 ರಂದು online virtual meeting mode ನಲ್ಲಿ ಜರುಗಿದ ಐದನೇ ಶೈಕ್ಷಣಿಕ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 29-09-2020 ರಂದು ಸಾಯಂಕಾಲ 04.00 ಗಂಟೆಗೆ **online virtual meeting mode** ನಲ್ಲಿ ಜರುಗಿದ ಐದನೇ ಶೈಕ್ಷಣಿಕ ಸಮತಿಯ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ನಡಾವಳಿಗಳನ್ನು ಯಾವುದೇ ಆಕ್ಷೇಪಣೆ ಬಾರದೇ ಇರುವುದರಿಂದ ಅನುಮೋದಿಸಿದರು.

**ವಿಷಯ ಸಂಖ್ಯೆ 4: ದಿನಾಂಕ 30-11-2020 ರಂದು online virtual meeting mode ನಲ್ಲಿ ಜರುಗಿದ ವಿಶೇಷ ಶೈಕ್ಷಣಿಕ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 30-11-2020 ರಂದು ಸಾಯಂಕಾಲ 04.00 ಗಂಟೆಗೆ **online virtual meeting mode** ನಲ್ಲಿ ಜರುಗಿದ ವಿಶೇಷ ಶೈಕ್ಷಣಿಕ ಸಮತಿಯ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಈ ವಿಶೇಷ ಸಮಿತಿ ಸಭೆ ಮುಖ್ಯವಾಗಿ ವಿಶ್ವವಿದ್ಯಾಲಯದ ಮುಂದಿನ ದಿನಮಾನಗಳಲ್ಲಿ ತೆಗೆದುಕೊಳ್ಳಬೇಕಾದ ಚಟುವಟಿಕೆಗಳ ಕುರಿತು ಸಲಹೆ ಸೂಚನೆ ನೀಡುವುದಕ್ಕೆ ಕರೆಯಲಾಗಿತ್ತು. ಹಾಗೆಯೇ ಬೇರೆ ಸಮಿತಿಗಳಲ್ಲಿ ಮತ್ತು ಪ್ರಧಾನ ಕಾರ್ಯದರ್ಶಿಗಳು ಸಲಹೆ ನೀಡಿದ್ದರು. ಒಟ್ಟು ಬಂದಿರುವ ಸಲಹೆಗಳನ್ನು ಕ್ರೋಡಿಕರಿಸಿ ವಿಶ್ವವಿದ್ಯಾಲಯದ ಗುರಿಯನ್ನು ಕಾರ್ಯಗತಗೊಳಿಸಲು ಶ್ರೀ. ಆರ್. ಎಸ್. ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವದಾಗಿ ತಿಳಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ನಡಾವಳಿಗಳನ್ನು ಯಾವುದೇ ಆಕ್ಷೇಪಣೆ ಬಾರದೇ ಇರುವುದರಿಂದ ಅನುಮೋದಿಸಿದರು.

**ವಿಷಯ ಸಂಖ್ಯೆ 5 : ದಿನಾಂಕ 02-12-2020 ರಂದು online virtual meeting mode ನಲ್ಲಿ ಜರುಗಿದ 5ನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 02-12-2020 ರಂದು ಮುಂಜಾನೆ 11.00 ಗಂಟೆಗೆ **online virtual meeting mode** ನಲ್ಲಿ ಜರುಗಿದ 5ನೇ ಹಣಕಾಸು ಸಮತಿಯ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಹಾಗೂ ಹಣಕಾಸು ಅಧಿಕಾರಿಗಳು ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ನಡಾವಳಿಗಳನ್ನು ಪರಿಶೀಲಿಸಿ ಚರ್ಚಿಸಲಾಯಿತು. ನಡಾವಳಿಗಳಲ್ಲಿನ ವಿಷಯಗಳ ಕುರಿತು ಮಾನ್ಯ ಕುಪತಿಗಳ ಹಂತದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲು ಸರ್ವಾನುಮತದಿಂದ ಸಭೆ ಅನುಮೋದಿಸಿತು. ರಾಜ್ಯ ಸರ್ಕಾರ ಕಾಲಕಾಲಕ್ಕೆ ಅನುದಾನ ಬಿಡುಗಡೆಗೊಳಿಸಿ ಸಹಕಾರ ನೀಡುತ್ತಿರುವದಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಮುಂದುವರೆದು ಕಾರ್ಯವಿಸ್ತಾರ ಮಾಡಲು SCP/TSP ಯೋಜನೆ ಅಡಿ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದಿಸಿದ ಪ್ರಕಾರ ಪ್ರಸ್ತಾವನೆ ಸಲ್ಲಿಸಲು ಪ್ರಕ್ರಯೆ ಕೈಗೊಳ್ಳುತ್ತಿರುವ ವಿಷಯವನ್ನು ತಿಳಿಸಿದರು.

**ವಿಷಯ ಸಂಖ್ಯೆ 6: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಾರ್ಷಿಕ ವರದಿ 2019-20 ಯ ಪರಿಗಣನೆ ಹಾಗೂ ಅನುಮೋದನೆ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016 ರ ಪ್ರಕರಣ 62 (1) ಅಡಿಯಲ್ಲಿ ಮಾಡಿದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ವಾರ್ಷಿಕ ವರದಿ ವಿನಿಮಯಗಳು, 2018 ರ ಪ್ರಕರಣ 3(2) ರನ್ವಯ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಹಣಕಾಸು ವರ್ಷದ ಚಟುವಟಿಕೆಗಳನ್ನು, ಗುರಿ ಮತ್ತು ಸಾಧನೆಗಳನ್ನು ತೋರಿಸುವ ಎಲ್ಲಾ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಅದರನ್ವಯ 2017-18 ಮತ್ತು 2018-19 ಸಾಲಿನ ವಾರ್ಷಿಕ ವರದಿಯನ್ನು 10-08-2020ರಂದು ಸಲ್ಲಿಸಲಾಗಿದೆ.

2019-20 ಸಾಲಿನ ವಾರ್ಷಿಕ ವರದಿ ಕರಡು ಪ್ರತಿಯನ್ನು ಸಿದ್ಧಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮಾನ್ಯ ಕುಲಪತಿಗಳು ವಾರ್ಷಿಕ ವರದಿಯಲ್ಲಿರುವ ವಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ವಾರ್ಷಿಕ ವರದಿ ಸಲ್ಲಿಸುವುದು ಸರ್ಕಾರದ ಕಾರ್ಯವಿಧಾನವಾದ್ದರಿಂದ ಯಾವುದೇ ಆಕ್ಷೇಪಣೆ ಬಾರದೇ ಇರುವುದರಿಂದ ಅನುಮೋದಿಸಿದರು.

ವಿಷಯ ಸಂಖ್ಯೆ 7: **"Regulations Governing Cadre, Recruitment and Promotions of Non-Teaching, Technical and Ministerial Staff in the KSRDPR University, 2019" ಕರಡು ಪ್ರತಿಯನ್ನು ಅನುಮೋದಿಸುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 56ರನ್ವಯ "Regulations Governing Cadre, Recruitment and Promotions of Non-Teaching, Technical and Ministerial Staff in the KSRDPR University, 2019" ರಚಿಸಿ ದಿನಾಂಕ 19-07-2020ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಲ್ಲಿಸಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವಿನಿಯಮಗಳನ್ನು ಪರಿಶೀಲಿಸಿ ಪತ್ರ ಸಂಖ್ಯೆ. ಗ್ರಾಅಪ 128 ಜಿಪಸ 2019(ಭಾಗ-16), ದಿನಾಂಕ 03-10-2019ರಂದು Clause 14 "Appointment on Contract" ಅನ್ನು ತೆಗೆದುಹಾಕಿ, ಪರಿಷ್ಕರಿಸಿ ಮರು ಸಲ್ಲಿಸುವಂತೆ ನಿರ್ದೇಶಿಸಿ ಪತ್ರ ಬರೆದಿರುತ್ತಾರೆ.

ಸದರಿ Clause ನ ವಿವರ ಈ ಕೆಳಕಂಡಂತಿದೆ.

**Clause 14 "Appointment on Contract"**

(1) Notwithstanding anything to the contrary contained in these Regulations, the Executive Council/Vice-Chancellor may, as provided in Rule 15 of Karnataka Civil Services (General Recruitment) Rules, 1977, make appointment on contract against the sanctioned strength as per C & R Regulations to a post in the University, of a person who in the opinion of the Executive Council/Vice-Chancellor, in respect of posts belonging to Group-A and Group-B, and the Vice-Chancellor in the case of Group-C and Group-D posts, as per Section 68 of the Act, is able to discharge the duties of such post on such terms and conditions as may be determined by agreement.

(2) The appointment on contract may be for a period of three years at a time. However, on satisfactory performance, such persons may be reappointed on such terms and conditions as prescribed from time to time till such persons attain the age of superannuation, with the approval of the Executive Council/Vice-Chancellor as the case may be. The persons appointed on contract basis shall be entitled for Basic Pay, D.A, H.R.A, and leaves applicable for the respective post and not eligible for promotion, annual increment, pension, CCA but are eligible for Provident Fund as per prevailing rules.

(3) The person appointed on contract shall give an undertaking to the effect that he/she shall not claim for regularization/regular appointment on the basis of contract appointment.

ಸದರಿ ವಿಷಯವನ್ನು 29-09-2020 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ 5ನೇ ಸಭೆಯಲ್ಲಿ ಸದಸ್ಯರು ಅನುಮೋದಿಸಿದ್ದು, ಅದರ ಕರಡು ಪ್ರತಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮಾನ್ಯ ಅಧ್ಯಕ್ಷರು ಸಭೆಗೆ **Clause 14 "Appointment on Contract"**ವಿಷಯದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಇದಕ್ಕೆ ಸಂಬಂದಿಸಿ ಸರ್ಕಾರದ ಕಾರ್ಯವಿಧಾನದೊಂದಿಗೆ ಮುಂದುವರಿಯಬಹುದು ಎಂದು ತಿಳಿಸುತ್ತ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಸದಸ್ಯರು ಸದರಿ ವಿಷಯವನ್ನು ಅನುಮೋದಿಸಿದರು.

**ವಿಷಯ ಸಂಖ್ಯೆ 8: "Karnataka State Rural Development and Panchayat Raj University (Classification, Control and Appeal) Rules, 2019" ಪ್ರತಿಯನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 58(5(xiii)) ಮತ್ತು 58(2)ರನ್ವಯ "Karnataka State Rural Development and Panchayat Raj University (Classification, Control and Appeal) Rules, 2019" ರಚಿಸಿ ಕಾರ್ಯನಿರ್ವಾಹಕ ಪರಿಷತ್ತು ಮತ್ತು ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ದಿನಾಂಕ 24-06-2020ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಸಲ್ಲಿಸಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವಿನಿಯಮಗಳನ್ನು ಪರಿಶೀಲಿಸಿ ಪತ್ರ ಸಂಖ್ಯೆ, ಗ್ರಾಅಪ 128 ಜಿಪಸ 2019(ಭಾಗ-12), ದಿನಾಂಕ 16-10-2020ರಂದು ಸದರಿ ನಿಯಮಗಳಿಗೆ ಮಾನ್ಯ ಘನತೆವೆತ್ತ ರಾಜ್ಯಪಾಲರ ಅನುಮೋದನೆ ಅಗತ್ಯವಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರಿದು ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 2020 ವನ್ನು ಪ್ರಕಟಿಸುವ ನಿರೀಕ್ಷೆ ಇದ್ದು, ಸದರಿ ತಿದ್ದುಪಡಿಗಳನ್ನು ವಿಶ್ವವಿದ್ಯಾಲಯದ ವಿಯಮಗಳಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಮತ್ತು ಶೈಕ್ಷಣಿಕ ಪರಿಷತ್ತಿನ ಅನುಮೋದನೆ ಪಡೆದು ಕಾಲ ಕಾಲಕ್ಕೆ ಸಂಯೋಜಿಸಲಾಗುವುದು. ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಗಮನಕ್ಕೆ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಸದಸ್ಯರುಗಳಿಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಯಾವುದೇ ಅಸಮ್ಮತಿ ಇಲ್ಲದೇ ಅನುಮೋದಿಸಿದರು.

**ವಿಷಯ ಸಂಖ್ಯೆ 9: ಪ್ರತಿ ತಿಂಗಳ 2 ಮತ್ತು 4ನೆಯ ಶನಿವಾರಗಳನ್ನು ವಿಶ್ವವಿದ್ಯಾಲಯದ ಕಛೇರಿಗಳಿಗೆ ಘೋಷಿಸಿರುವ ಸಾರ್ವತ್ರಿಕ ರಜೆಯನ್ನು ರದ್ದು ಗೊಳಿಸುವ ಕುರಿತು.**

**ಪರಾಮರ್ಷನ ಟಿಪ್ಪಣಿ:–**

2020–21 ರ ಶೈಕ್ಷಣಿಕ ವರ್ಷದ ಪದವಿ ಹಾಗೂ ಸ್ನಾತಕೋತ್ತರ್ ಪದವಿ ತರಗತಿಗಳನ್ನು ಪ್ರಾರಂಭಿಸುವ ಹಾಗೂ ಕೊವಿಡ್–19 ಮಹಾಮರಿ ಕುರಿತು ಯು.ಜಿ.ಸಿಯು ಬಿಡುಗಡೆ ಮಾಡಿದ ಮಾರ್ಗಸೂಚಿ ಅನುಸಾರ, ಕೊವಿಡ್–19 ಮಹಾಮಾರಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಾದ ಹಿನ್ನಡೆಯನ್ನು ಸರಿದೂಗಿಸಲು ವಿಶ್ವವಿದ್ಯಾಲಯಗಳು 2020–21 ಮತ್ತು 2021–22 ರ ಶೈಕ್ಷಣಿಕ ವರ್ಷದ ಎಲ್ಲ ವಾರದ ಆರು ದಿನ ಕಾರ್ಯನಿರ್ವಹಿಸಲು ಸೂಚಿಸಲಾಗಿದ್ದು, ಅದರಂತೆ ಪ್ರತಿ ತಿಂಗಳ 2 ಮತ್ತು 4ನೆಯ ಶನಿವಾರಗಳನ್ನು ವಿಶ್ವವಿದ್ಯಾಲಯದ ಕಛೇರಿಗಳಿಗೆ ಘೋಷಿಸಿರುವ ಸಾರ್ವತ್ರಿಕ ರಜೆಯನ್ನು ರದ್ದು ಗೊಳಿಸುಲು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಯು.ಜಿ.ಸಿ ಮಾರ್ಗಸೂಚಿಯ ಅನುಸಾರ 2020–21 ಮತ್ತು 2021–22 ರ ಶೈಕ್ಷಣಿಕ ವರ್ಷದ ಎಲ್ಲ ವಾರದ ಆರು ದಿನ ಕಾರ್ಯನಿರ್ವಹಿಸಲು ನಮ್ಮ ವಿಶ್ವವಿದ್ಯಾಲಯವು ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಪ್ರತಿ ತಿಂಗಳ 2 ಮತ್ತು 4ನೇ ಶನಿವಾರ ಘೋಷಿಸಿರುವ ಸಾರ್ವತ್ರಿಕ ರಜೆಯನ್ನು ರದ್ದು ಗೊಳಿಸಿ ಶೈಕ್ಷಣಿಕ ಹಾಗೂ ಸಂಬಂಧಪಟ್ಟ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಚರ್ಚಿಸಿ, ಅವಶ್ಯಕತೆಗನುಗುಣವಾಗಿ ಮಾನ್ಯ ಕುಲಪತಿಗಳ ಹಂತದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿ ತಿಳಿಸಿದರು.

**ವಿಷಯ ಸಂಖ್ಯೆ 10: ವಿಶ್ವವಿದ್ಯಾಲಯದ 2020–21ನೇ ಶೈಕ್ಷಣಿಕ ಸಾಲಿಗೆ ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಸ್ನಾತಕೋತ್ತರ ಪದವಿ ಪ್ರೋಗ್ರಾಮಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯನ್ನು 10 ಸೀಟ್‌ಗಳ ಹೆಚ್ಚುವರಿ ಮಾಡಿ ಸೀಟ್ ಮ್ಯಾಟ್ರಿಕ್ಸ್ ನಿಗದಿಪಡಿಸಿರುವ ವಿಷಯವನ್ನು ಪರಿಗಣಿಸುವ ಹಾಗೂ ಅನುಸಮರ್ಥನೆಗಾಗಿ.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದ 2020–21ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಿಸುವ ಕುರಿತು ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 34 (8) ರನ್ವಯ, ಕುಲಪತಿಗಳು ಸೀಟ್‌ಗಳ ನಿಗದಿ ಪಟ್ಟಿ (Seat matrix) ವಿಷಯಗಳನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿನ ಸಭೆ ದಿನಾಂಕ: 29–9–2020 ನಡಾವಳಿಗಳು (ವಿಷಯ ಸಂಖ್ಯೆ: 3) ರನ್ವಯ, ಹೆಚ್ಚು ಬೇಡಿಕೆಯಿರುವ ಪ್ರೋಗ್ರಾಮ್‌ಗೆ ವಿಶ್ವವಿದ್ಯಾಲಯದ ಲಭ್ಯವಿರುವ ಸಂಪನ್ಮೂಲ ಆಧಾರದ ಮೇರೆಗೆ ಅಗತ್ಯಕ್ಕೆ ತಕ್ಕಂತೆ ಪ್ರಸುತ್ತ ಸಾಲಿನಿಂದಲೇ ಹೆಚ್ಚಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಅನುಮೋದನೆಯಂತೆ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಾಯಿಸಿದಂತೆ ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಪ್ರೋಗ್ರಾಮಗೆ 2019–20 ರಲ್ಲಿ 30 ಸೀಟ್‌ಗಳನ್ನು ನಿಗದಿಪಡಿಸಲಾಗಿರುದನ್ನು 10 ಸೀಟ್‌ಗಳನ್ನು ಹೆಚ್ಚುವರಿ ಮಾಡಿ 40 ಸೀಟ್‌ಗಳಿಗೆ ಸೀಟ್ ಮ್ಯಾಟಿಕ್ಸ್ ನಿಗದಿಪಡಿಸಿರುವಂತೆ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಮೇಲಿನ ವಿಷಯದ ಬಗ್ಗೆ ವಿವರಿಸುತ್ತ ಕುಲಪತಿಗಳು, ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಪ್ರೋಗ್ರಾಮಿಗೆ ಪ್ರಸ್ತುತ 30 ಸೀಟ್‌ಗಳನ್ನು ನಿಗದಿಪಡಿಸಲಾಗಿದ್ದು, 2021–22 ಸಾಲಿನ ಪ್ರವೇಶಾತಿಯಲ್ಲಿ ಸದರಿ ಪ್ರೋಗ್ರಾಮಿಗೆ ನಿಗದಿ ಪಡಿಸಿರುವ(30) ಸೀಟ್ ಪಟ್ಟಿಗಿಂತ ಹೆಚ್ಚು ಅರ್ಜಿಗಳು ಬಂದಿದೆ. ಅದುದರಿಂದ 10 ಸೀಟ್‌ಗಳನ್ನು ಹೆಚ್ಚುವರಿ ಮಾಡಿ 40 ಸೀಟ್‌ಗಳಿಗೆ ಸೀಟ್ ಮ್ಯಾಟಿಕ್ಸ್ ನಿಗದಿಪಡಿಸುವಂತೆ ಕೋರಿದರು. ಸದಸ್ಯರು ಎಂ.ಎಸ್ಸಿ. (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಪ್ರೋಗ್ರಾಮಿಗೆ ಬೇಡಿಕೆ ಇದ್ದರೆ 10ರ ಬದಲು 15 ಹೆಚ್ಚು ಮಾಡಿ 45 ಸೀಟ್‌ಗಳಿಗೆ ಸೀಟ್ ಮ್ಯಾಟಿಕ್ಸ್ ನಿಗದಿ ಪಡಿಸಲು ಕುಲಪತಿಗಳ ಹಂತದಲ್ಲಿ ತಿರ್ಮಾನ ತೆಗೆದುಕೊಳ್ಳಲು ಸಹಮತಿ ವ್ಯಕ್ತಪಡಿಸಿದರು.

**ವಿಷಯ ಸಂಖ್ಯೆ 11: ವಿಶ್ವವಿದ್ಯಾಲಯದ 2020–21ನೇ ಸಾಲಿನ ವಿವಿಧ ಸ್ನಾತಕೋತ್ತರ ಪದವಿ ಡಿಪ್ಲೋಮಾ ಪ್ರೋಗ್ರಾಮುಗಳ ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, ಅರ್ಹತಾ ಮಾನದಂಡಗಳು, ಮತ್ತು ಪ್ರವೇಶಕ್ಕಾಗಿ ಮಾರ್ಗಸೂಚಿಗಳು, ಹಾಗೂ ಸೀಟ್ ನಿಗದಿ ಪಟ್ಟಿ (Seat matrix) ಮತ್ತು ಪ್ರವೇಶಾತಿ ಅಧಿಸೂಚನೆಯ ವಿಷಯಗಳನ್ನು ಪರಿಗಣಿಸುವ ಹಾಗೂ ಅನುಸಮರ್ಥನೆಗಾಗಿ.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದ 2020–21ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಿಸುವ ಕುರಿತು ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 5(VII), 34 (8), 57, ಹಾಗೂ 72 ರನ್ವಯ, ಕುಲಪತಿಗಳು ಪ್ರವೇಶ ಹಾಗೂ ಪರೀಕ್ಷಾ ಶುಲ್ಕ, (ಅನುಬಂಧ–1) ಅರ್ಹತಾ ಮಾನದಂಡಗಳು, (ಅನುಬಂಧ–2) ಮತ್ತು ಪ್ರವೇಶಕ್ಕಾಗಿ ಮಾರ್ಗಸೂಚಿಗಳು, (ಅನುಬಂಧ–3) ಹಾಗೂ ಸೀಟ್ ನಿಗದಿ ಪಟ್ಟಿ (Seat matrix) (ಅನುಬಂಧ–4) ಪ್ರವೇಶಾತಿ ಅಧಿಸೂಚನೆ (ಅನುಬಂಧ–5) ಪ್ರವೇಶಾತಿ ಅಧಿಸೂಚನೆ ವಿಷಯಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಹಾಗೂ K.S.R.D.P.R UNIVERSITY ORDINANCES GOVERNING THE ADMISSION OF STUDENTS TO THE VARIOUS COURSES, PAYMENT OF FEES, SCHOLARSHIP, CONDUCT AND RESIDENCE OF STUDENTS, 2019. ಗಳ ಪ್ರಕಾರ ಅಧಿಸೂಚಿಸಲಾಗಿರುತ್ತದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಚರ್ಚಿಸಿ ಅನುಮೋದಿಸಿದರು.

**ವಿಷಯ ಸಂಖ್ಯೆ 12: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಮೊದಲನೇ ಘಟಿಕೋತ್ಸವ ಸಂಬಂಧಿಸಿ ರಚಿಸಿದ ಸಮಿತಿ ಮತ್ತು ಸಮಿತಿ ಸಲ್ಲಿಸಿದ ವರದಿ ಅನುಮೋದಿಸುವುದು ಹಾಗೂ ಘಟಿಕೋತ್ಸವ ದಿನಾಂಕ ಹಾಗೂ ಸಂಬಂಧಿತ ಕೆಲಸಗಳ ಬಗ್ಗೆ ನಿರ್ಧಾರ.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2017-18 ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಥಮ ವರ್ಷ (2017-18) ಹಾಗೂ ದ್ವಿತೀಯ ವರ್ಷದ (2018-19) ಒಟ್ಟು 250 ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಘಟಿಕೋತ್ಸವದ ಮೂಲಕ ಸದರಿ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಪದಕ ವಿಜೇತರಿಗೆ ಸನ್ಮಾನಿಸಿ ಪದವಿಗಳನ್ನು ವಿತರಿಸಬೇಕಾಗಿದೆ. ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವಾದ್ದರಿಂದ ಅದನ್ನು ಯಶಸ್ವಿಗೊಳಿಸಲು ಪ್ರೊ. ಜೆ. ಜಿ ನಾಯಕ್ ಅವರ ಅಧ್ಯಕ್ಷತೆಯಲ್ಲಿ ತಜ್ಞರನ್ನೊಳಗೊಂಡ 5 ಸದಸ್ಯರ ಒಂದು ಸಮಿತಿಯನ್ನು ರಚಿಸಲಾಗಿದೆ (ಅನುಬಂಧ 1). ಸದರಿ ಸಮಿತಿಯು 21-11-2020 ಮತ್ತು 27-11-2020 ರಂದು ಸಭೆಗಳನ್ನು ನಡೆಸಿ ಕೆಲವು ಸಲಹೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದಾರೆ (ಅನುಬಂಧ 2). ಸದರಿ ಸಮಿತಿಯ ರಚನೆ, ವರದಿಗೆ ಮತ್ತು ವರದಿ ಅನ್ವಯ ಘಟಿಕೋತ್ಸವ ಉಪ-ಸಮಿತಿಗಳ ರಚನೆಗೆ (ಅನುಬಂಧ 3) ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆ ಕೋರಿ ಮಂಡಿಸಲಾಗಿದೆ.

ಸದರಿ ಘಟಿಕೋತ್ಸವವನ್ನು ಮಾರ್ಚನಲ್ಲಿ (ದಿನಾಂಕ 22.03.2021 ವಿಶ್ವವಿದ್ಯಾಲಯ ಉದ್ಘಾಟನ ದಿನದಂದು ನಡೆಸಲು ಉದ್ದೇಶಿಸಲಾಗಿದೆ) ನಡೆಸಲು ಅನುಮೋದನೆ (ಶೈಕ್ಷಣಿಕ ಪರಿಷತ್ತಿನ ಅನುಮೋದನೆ ಈಗಾಗಲೇ ದೊರೆತಿದ್ದು), ಮುಖ್ಯ ಅತಿಥಿಗಳು, ಇತರೆ ಗಣ್ಯರ ಆಹ್ವಾನಿಸುವ ಮತ್ತು ಗೌರವ ಡಾಕ್ಟರೇಟ್ ವಿತರಿಸುವ ಬಗ್ಗೆ ಚಿಂತನೆಗೆ ಕಾರ್ಯನಿರ್ವಾಹಕ ಪರಿಷತ್ತನ್ನು ಕೋರಿದೆ.

:: ನಿರ್ಣಯ::

ಸದರಿ ವಿಷಯವು ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಮಾನ್ಯ ಕುಲಪತಿಗಳು ವಿವರಿಸಿದರು. ವಿಶ್ವವಿದ್ಯಾಲಯದ Convocation for Conferring Degrees ವಿನಿಯಮ 2019 ರನ್ವಯ ಘಟಿಕೋತ್ಸವನ್ನು ಪ್ರತಿ ವರ್ಷದ ಡಿಸೆಂಬರ್ ತಿಂಗಳ ಒಳಗೆ ಮುಗಿಸ ಬೇಕಾಗಿರುತ್ತದೆ. ಕಾರಣಾಂತರಗಳಿಂದ ವಿಶ್ವವಿದ್ಯಾಲಯದಲ್ಲಿ ಇನ್ನೂ ಘಟಿಕೋತ್ಸವ ನಡೆಸಲಾಗಿರುವುದಿಲ್ಲ. ಅದಕ್ಕೆ ಅನುಗುಣವಾಗಿ ಮಾರ್ಚ ತಿಂಗಳಲ್ಲಿ ಘಟಿಕೋತ್ಸವವನ್ನು ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ವಿಶ್ವವಿದ್ಯಾಲಯದಲ್ಲಿ ಮೊದಲೇರಡು ಬ್ಯಾಚ್‌ನಲ್ಲಿ ಸುಮಾರು 250 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಘಟಿಕೋತ್ಸವಕ್ಕೆ ಸಂಬಂಧಿಸಿದ ವಿಷಯಗಳ ನಿರ್ಧಾರಗಳು ಈ ಕೆಳಕಂಡಂತೆ ತೆಗೆದುಕೊಳ್ಳಬೇಕಾಗಿರುತ್ತದೆ ಎಂದು ವಿವರಿಸಿದರು.

ವರದಿಯಲ್ಲಿ ನೀಡಿದ ಮುಖ್ಯಾಂಶಗಳ ಕುರಿತು ಈ ಕೇಳಗಿನಂತೆ ಚರ್ಚಿಸಲಾಯಿತು.

1. ಮಾರ್ಚ್ ತಿಂಗಳಲ್ಲಿ ಘಟಿಕೋತ್ಸವ ನಡೆಸಬಹುದೇ ಎಂಬ ಪ್ರಶ್ನೆಗೆ ಎಲ್ಲಾ ಸದಸ್ಯರು ಒಪ್ಪಿಗೆ ನೀಡಿರುತ್ತಾರೆ. ಹಾಗೂ ಘಟಿಕೋತ್ಸವ ನಡೆಸುವ ಸ್ಥಳಕ್ಕೆ ಸಂಬಂಧಪಟ್ಟಂತೆ ಸದಸ್ಯರು ಈ ಕೆಳಗಿನಂತೆ ಆದ್ಯತೆ ಮೇರೆಗೆ ಸ್ಥಳಗಳನ್ನು ಸೂಚಿರುತ್ತಾರೆ.
   – ಸದಸ್ಯರು ಈ ಕೆಳಕಂಡಂತೆ ಆದ್ಯತೆ ಮೇರೆಗೆ ಸ್ಥಳಗಳನ್ನು ಸೂಚಿಸಿರುತ್ತಾರೆ.
   ವಿಶ್ವವಿದ್ಯಾಲಯದ ತರಬೇತಿ ಕೇಂದ್ರದ ಕಟ್ಟಡದಲ್ಲಿ,
   ಗದುಗಿನ ಕನ್ನಡ ಸಾಹಿತ್ಯ ಭವನದಲ್ಲಿ,
   ಗದುಗಿನ ಅಂಬೇಡ್ಕರ್ ಭವನದಲ್ಲಿ,
   ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಬೇರೆ ಯಾವುದಾದರೂ ಸೂಕ್ತ ಸ್ಥಳದಲ್ಲಿ ಆಯೋಜಿಸಲು ತೀರ್ಮಾನಿಸಲಾಯಿತು.

2. ಗೌರವ ಪದವೀಧರರ ಹೆಸರುಗಳನ್ನು ಸೂಚಿಸಲು ಪರಿಶೀಲನಾ ಸಮತಿ ರಚಿಸುವುದು.
   - ವಿಶ್ವವಿದ್ಯಾಲಯದ Award of Honorary Degrees or Academic Distinction at the Annual Connovation Regulations, 2019 ರನ್ವಯ Expert Scrutiny Committee ರಚಿಸುವ ಕುರಿತಂತೆ ವಿವರಣೆ ನೀಡಿದರು. ಹಾಗೂ ಇದರನ್ವಯ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ ವ್ಯಕ್ತಿಗಳನ್ನು ಅಥವಾ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರ ದಲ್ಲಿ ಕಾರ್ಯದರ್ಶಿಗಳಾಗಿ ಸೇವೆಸಲ್ಲಿಸಿರುವಂತಹ ವ್ಯಕ್ತಿಗಳನ್ನು ವಿಶ್ವವಿದ್ಯಾಲಯದ ವತಿಯಿಂದ Scrutiny Committee ಸದಸ್ಯರಾಗಿ ನೇಮಿಸಲು ಅವಕಾಶವಿರುತ್ತದೆ ಎಂದು ವಿವರಿಸಿ ಮಾನ್ಯ ಕುಲಪತಿಗಳು ಡಾ. ಮೀನಾಕ್ಷಿಸುಂದರಂ ಅಥವಾ ಪ್ರೊ. ಬಿ.ತಿಮ್ಮೇಗೌಡರವರ ಹೆಸರನ್ನು ಪರಿಗಣಿಸಬಹುದಾಗಿ ಸಲಹೆ ನೀಡಿದರು.
   - ಸಭೆಯಲ್ಲಿ ಈ ವಿಷಯದ ಕುರಿತು ಚರ್ಚಿಸಲಾಗಿ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ಡಾ. ಟಿ. ವಿ. ಕಟ್ಟಿಮನಿ, ಕುಲಪತಿಗಳು, ಕೇಂದ್ರಿಯ ಬುಡಕಟ್ಟು ವಿಶವಿದ್ಯಾಲಯ, ಆಂದ್ರಪ್ರದೇಶ, ವಿಜಯನಗರಂ ಇವರ ಹೆಸರನ್ನು ಎಲ್ಲಾ ಸದಸ್ಯರ ಸಹಮತಿಯೊಂದಿಗೆ ಅನುಮೋದಿಸಲಾಗಿ ಕುಲಾಧಿಪತಿಗಳಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

3. ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಯ್ಕೆಮಾಡುವುದು
   - ಸದಸ್ಯರು ಈ ಕೆಳಗಿನಂತೆ ಹೆಸರುಗಳನ್ನು ಸೂಚಿಸಿರುತ್ತಾರೆ.
     1) **Smt. Elabehn Bhatt**, Chairperson, Sabarmati Ashram Preservation and Memorial Trust, Gujarat.
     2) **Shri Rajendra Singh**, Magsaysay Awardee and Environmentalist, Rajasthan.
     3) **Shri Popatrao Baguji Pawar**, Padma Shri Awardee and the Executive Director of Maharashtra State Government's Model Village Programme.
     4) **Shri Kisan Baburao (Anna) Hazare**, Social Activist, Maharashtra.
     5) **Prof. Sudarshan Iyengar**, Former Vice Chancellor of Gujarat Vidyapith.
     6) **Dr. Prakash Baba Amte**, Padma Shri and Magsaysay Awardee and Social Worker, Maharashtra.

7) **Prof. Bidyut Chakrabarthy,** Vice Chancellor, Visva Bharati, Santiniketan, West Bengal.
8) **Shri Dilip Rath**, Chairman, Institute of Rural Management Anand, Gujarat.
9) **Prof. Anil Kumar Gupta**, Padma Shri Awardee and Rtd. Professor IIM, Ahmedabad.
10) **Shri R S Sodhi**, Managing Director, GCMMF (AMUL), Gujarat.
11) **Dr. R. Balasubramaniam**, Founder and Chairman, GRAAM, Mysuru, Karnataka

ಈ ಮೇಲಿನಂತೆ ಪಟ್ಟಿಯನ್ನು ಕುಲಾಧಿಪತಿಗಳು ಹಾಗೂ ಘನತೆವೆತ್ತ ರಾಜ್ಯಪಾಲರಿಗೆ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಯಿತು.

4. ಡ್ರೆಸ್ ಕೋಡ್

- **ಈ ವಿಷಯದ ಕುರಿತಂತೆ ಎಲ್ಲ ಗೌರವಾನ್ವಿತ ಆಹ್ವಾನಿತರ ಹಾಗೂ ಅಥಿತಿಗಳ ಪೋಶಾಕುಗಳ ಬಗ್ಗೆ ಚರ್ಚಿಸಿ**
- ವಿಶ್ವವಿದ್ಯಾಲಯದ Convocation for Conferring Degrees ವಿನಿಯಮ 2019 ರನ್ವಯ, ತಜ್ಞರ ಸಮಿತಿ ಶಿಫಾರಸ್ಸಿನ್ವಯ ಹಾಗೂ ಮಾನ್ಯ ಘನತೆವೆತ್ತ ರಾಜ್ಯಪಾಲರ ಪತ್ರದಲ್ಲಿನ (ಪತ್ರ ಸಂಖ್ಯೆ: GS 13 GUM 2020 dated: 09-11-2020) ಸೂಚನೆಗಳನ್ವಯ ಅನುಬಂಧ 1 ರಲ್ಲಿರುವಂತೆ ಅಳವಡಿಸಿಕೋಳ್ಳುವಂತೆ ತೀರ್ಮಾನಿಸಲಾಯಿತು.

5. ಘಟಿಕೋತ್ಸವದ ವೆಚ್ಚ

ತಜ್ಞರ ಸಮಿತಿ ಶಿಫಾರಸ್ಸಿನ್ವಯ ಹಾಗೂ ಆಯವಯ ದನ್ವಯ ಘಟಿಕೋತ್ಸವದ ಆಯೋಜನೆಗೆ ರೂಪಾಯಿ.25 ಲಕ್ಷದವರೆಗೆ ನಿಗದಿ ಪಡಿಸಲು ಅನುಮೋದಿಸಲಾಯಿತು.

6. ಪದಕ

- ಪ್ರಥಮ ಹಾಗೂ ದ್ವಿತೀಯ ಬ್ಯಾಚ್‌ನಲ್ಲಿ ತೇರ್ಗಡೆಯಾದ ಸುಮಾರು 12 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಬೇಕಾಗಿದ್ದು ಇದಕ್ಕಾಗಿ ಒಂದು ಪದಕಕ್ಕೆ ಅಂದಾಜು ಮೊತ್ತ ಗರಿಷ್ಟ 10 ಸಾವಿರ ರೂಪಾಯಿವರೆಗೆ ಮೀಸಲಿಡಲು ತೀರ್ಮಾನಿಸಲಾಯಿತು. ಮುಂದುವರೆದು ಘಟಿಕೋತ್ಸವಗಳಿಗೆ ದತ್ತಿ ಹಣವನ್ನು ವಿವಿಧ ಸಂಸ್ಥೆಗಳಿಂದ ಅಥವಾ ಪ್ರಸಿದ್ಧ ವ್ಯಕ್ತಿಗಳಲ್ಲಿ ಪಡೆಯಲು ವಿಶ್ವವಿದ್ಯಾಲಯದ ಹಂತದಲ್ಲಿ ಪ್ರಯತ್ನ ಮಾಡುವಂತೇಯು ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು.
- ಮುಂದುವರೆದು ಘಟಿಕೋತ್ಸವಕ್ಕೆ ಸಂಬಂಧಪಟ್ಟಂತೆ, ಕುಲಪತಿಗಳ ಹಂತದಲ್ಲಿ ಸೂಕ್ತಕ್ರಮ ಜರುಗಿಸಿ ಘನವೆತ್ತ ರಾಜ್ಯಪಾಲರು ಇವರಿಗೆ ಪತ್ರ ವ್ಯವಹಾರ ಇತ್ಯಾದಿ ಮಾಡಲು ಅನುಮೋದಿಸಿದರು.
- ಈ ಎಲ್ಲ ವಿಷಯಗಳ ಕುರಿತಂತೆ ಘಟಿಕೋತ್ಸವ ಸಮಾರಂಭವನ್ನು ಯಶಸ್ವಗೋಳಿಸಲು ವಿಶವಿದ್ಯಾಲಯದ ಹಂತದಲ್ಲಿ ವಿವಿಧ ಸಮಿತಿಗಳನ್ನು ರಚಿಸಿ ಸೂಕ್ತ ಕ್ರಮ ಜರುಗಿಸಲು ಹಾಗೂ ಘನತೆವೆತ್ತ ರಾಜ್ಯಪಾಲರಿಗೆ ಭೇಟಿಯಾಗಲು ಕುಲಪತಿಗಳು ಅಗತ್ಯ ಕ್ರಮ ಕೈಗೊಳ್ಳುವಂತೆ ಅನುಮೋದಿಸಿದರು.

**ವಿಷಯ ಸಂಖ್ಯೆ 13: ವಿಶ್ವವಿದ್ಯಾಲಯವು ನೀಡುವ ವಿವಿಧ ಪ್ರಮಾಣ ಪತ್ರಗಳಿಗೆ ಶುಲ್ಕ ನಿಗದಿ ಪಡಿಸುವ ಕುರಿತು.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2017-18 ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದೆ. ಪ್ರಸ್ತುತ, ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ನೀಡುವ ವಿವಿಧ ಪ್ರಮಾಣ ಪತ್ರಗಳಿಗೆ ಯಾವುದೇ ಶುಲ್ಕವನ್ನು (ಅಂಕಪಟ್ಟಿಯನ್ನು ಹೊರತುಪಡಿಸಿ) ಸಂಗ್ರಹಿಸುತ್ತಿಲ್ಲ ಮತ್ತು ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ ರ್‍ಯಾಂಕ್ ಮತ್ತು ಕ್ರೋಢಿಕೃತ ಅಂಕಪಟ್ಟಿಯನ್ನು ಪಡೆಯಲು ವಿದ್ಯಾರ್ಥಿಗಳು ಸಲ್ಲಿಸುವ ದಾಖಲೆಗಳು ಮತ್ತು ಶುಲ್ಕವನ್ನು ನಮೂದಿಸಿಲ್ಲ. ಸದರಿ ವಿಷಯದ ಬಗ್ಗೆ ರಾಜ್ಯದ ಇತರೆ ಎಲ್ಲಾ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ನೀಡುವ ವಿವಿಧ ಪ್ರಮಾಣ ಪತ್ರಗಳು ಮತ್ತು ಶುಲ್ಕವನ್ನು ಪರಿಗಣಿಸಿ, ಅದರಾನುಸಾರ ಶುಲ್ಕವನ್ನು ನಿಗದಿ ಪಡಿಸಿ ಅದರ ಕರಡು ಪ್ರತಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ. (ಅನುಬಂಧ 1)

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ಕುಲಸಚಿವರು ಹಾಗೂ ಕುಲಪತಿಗಳು ವಿವರಿಸುತ್ತ, ಬೇರೆ ವಿಶ್ವವಿದ್ಯಾಲಯಗಳಲ್ಲಿ ಪ್ರತಿ ವರ್ಷ ವಿದ್ಯಾರ್ಥಿಯ ಪ್ರವೇಶಾತಿ ಶುಲ್ಕ ಶೇಕಡ 10 ರಷ್ಟು ಹೆಚ್ಚಿಸುತ್ತಾರೆ ಮತ್ತು ಇತರೆ ಪ್ರಮಾಣ ಪತ್ರಗಳಿಗೆ ಶುಲ್ಕ ನಿಗದಿ ಮಾಡಿದ್ದಾರೆ. ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರವೇಶಾತಿ ಶುಲ್ಕ ಕೂಡಾ ಹೆಚ್ಚಿಸಿಲ್ಲ. ಆದಕಾರಣ ವಿಶ್ವವಿದ್ಯಾಲಯದಲ್ಲಿ ನೀಡುವ ವಿವಿಧ ಪ್ರಮಾಣ ಪತ್ರಗಳಿಗೆ ಶುಲ್ಕ ನಿಗದಿ ಮಾಡಲು ವಿನಂತಿಸಿದರು.

ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯದ ಬಗ್ಗೆ ಚರ್ಚಿಸುತ್ತ, ನಮ್ಮ ವಿಶ್ವವಿದ್ಯಾಲಯದಲ್ಲಿ ಇಡೀ ಕರ್ನಾಟಕದಲ್ಲಿ ಅತೀ ಕಡಿಮೆ ಪ್ರವೇಶಾತಿ ಶುಲ್ಕ ಹಾಗೂ ಪ್ರಮಾಣ ಪತ್ರದ ಶುಲ್ಕವನ್ನು ಗಮನಿಸಿ ಪ್ರಸ್ತಾಪಿತ ಶುಲ್ಕವನ್ನು ಅನುಮೋದಿಸಿದರು.

**ವಿಷಯ ಸಂಖ್ಯೆ 14: ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೌಲ್ವಿಚಾರಣಾ ಕೇಂದ್ರದ ಮಾರ್ಗಸೂಚಿ (Guidelines) ರಚಿಸುವುದು ಹಾಗೂ ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಅಧಿನಿಯಮ 43,44 ರಂತೆ ವಿಶ್ವವಿದ್ಯಾಲಯದಲ್ಲಿ ತರಬೇತಿ, ಪ್ರಕಟಣೆ ಮತ್ತು ಮೌಲ್ವಿಚಾರಣೆ ಕೇಂದ್ರ ರಚಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ, ಅಧಿಸೂಚನೆ: RDPRU: 01: CTP: 2019 dated 06.03.2020 ಪ್ರಕಾರ ಸಮಿತಿಯನ್ನು ರಚಿಸಲಾಗಿದೆ. ವಿಶ್ವವಿದ್ಯಾಲಯ ಅಧಿನಿಯಮ ಪ್ರಕರಣ 44 ರಲ್ಲಿ ವಿವರಿಸಿದಂತೆ, ತರಬೇತಿ, ಪ್ರಕಟಣೆ ಮತ್ತು

ಮೇಲ್ವಿಚಾರಣೆ ಕೇಂದ್ರದ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿಸೂಚನೆ: RDPRU: 02: CTP: 2019 dated 18.11.2020 ಪ್ರಕಾರ ಪ್ರೊ.ಬಿ.ತಿಮ್ಮೇಗೌಡ ವಿಶ್ರಾಂತ ಕುಲಪತಿಗಳು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇವರ ಅಧ್ಯಕ್ಷತೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಷಯದಲ್ಲಿ ಪರಿಣಿತ ಹಿರಿಯ ಸಂಪನ್ಮೂಲ ವ್ಯಕ್ತಿಗಳನ್ನೊಳಗೊಂಡು ಸಲಹಾ ಸಮಿತಿ ರಚಿಸಲಾಗಿದೆ.

ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರವು ಕಾರ್ಯಪ್ರವೃತ್ತಿಯಾಗಿದ್ದು, ಈಗಾಗಲೇ ಪಂಚಾಯತ್ ರಾಜ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ. ಅಲ್ಲದೆ ಪ್ರಕಟಣೆ ವಿಭಾಗದಿಂದ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪುಸ್ತಕ, ಮಾಸಿಕ ಹಾಗೂ ಜರ್ನಲ್‌ಗಳು ಇತ್ಯಾದಿ ಪ್ರಕಟಣೆಗಳನ್ನು ಪ್ರಕಟಿಸಲು ಕಾರ್ಯೋನ್ಮುಖವಾಗಿದೆ. ಈ ದಿಶೆಯಲ್ಲಿ ಈಗಾಗಲೇ ಮೂರು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ವಿಶ್ವವಿದ್ಯಾಲಯ ಅಧಿನಿಯಮದ 43,44 ರಂತೆ, ತರಬೇತಿ ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು (Guidelines) ರಚಿಸಬೇಕಾಗಿದ್ದು, ಅದರಂತೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಈಗಿರುವ ಪ್ರಸಾರಾಂಗ ವಿಭಾಗಗಳ ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿ, ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರಕ್ಕೆ ಮಾರ್ಗಸೂಚಿಗಳನ್ನು (Guidelines) ರಚಿಸಲು, ಈ ಕೇಂದ್ರಕ್ಕೆ ಸಂಬಂಧಿಸಿದಂತೆ, ಪ್ರತ್ಯೇಕ ಬ್ಯಾಂಕ ಖಾತೆಯನ್ನು ತೆರೆಯಲು ಹಾಗೂ ಖಾತೆಯನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಪರಿಷತ್‌ನ ಪರಿಗಣನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ::

ಸಭಾಧ್ಯಕ್ಷರು ಮೇಲಿನ ವಿಷಯದ ಬಗ್ಗೆ ಮಾತನಾಡುತ್ತ, ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಪ್ರಕಟಣೆ ವಿಭಾಗದಿಂದ ಕಳೆದ 6 ತಿಂಗಳಲ್ಲಿ 3 ಪುಸ್ತಕ ಈಗಾಗಲೇ ಬಿಡುಗಡೆಗೊಳಿಸಿದ್ದು ವಿಭಾಗದ ಮುಂದಿನ ಯೋಜನೆಗಳ ಬಗ್ಗೆ ಸದಸ್ಯರಲ್ಲಿ ಸಲಹೆಗಳನ್ನು ಕೇಳಿದರು.

ಪ್ರೊ ಟಿ. ವಿ. ಕಟ್ಟೀಮನಿ, ಕುಲಪತಿಗಳು, ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಆಂಧ್ರ ಪ್ರದೇಶ, ವಿಜಯನಗರಂ, ಆಂಧ್ರ ಪ್ರದೇಶ, ಇವರು ಮಾತನಾಡುತ್ತ ವಿಶ್ವವಿದ್ಯಾಲಯವು ಒಂದು ವಿಷಯದ ಬಗ್ಗೆ ಪುಸ್ತಕ, ಮಾಸಿಕ ಹಾಗೂ ಜರ್ನಲ್ ಅನ್ನು ಪ್ರಕಟಣೆ ಮಾಡುವ ಮೊದಲು ಒಂದು ಸಮಿತಿ ರಚಿಸಿ ವಿಷಯವಾರು ಅಭಿಪ್ರಾಯವನ್ನು ಪಡೆದರೆ ಸೂಕ್ತ. ಒಂದು ಪುಸ್ತಕ ಪ್ರಕಟವಾದ ಮೇಲೆ ಅದು ಮುಲೆಗುಂಪಾಗದೆ ಜನರಿಗೆ ತಲುಪಬೇಕು. ಅದಕ್ಕಾಗಿ ಪ್ರತಿಷ್ಠಿತ ಪ್ರಕಾಶಕರ ಸಹಯೋಗದೊಂದಿಗೆ ಪ್ರಕಟಣೆ ಮಾಡಿದರೆ, ಅದಕ್ಕೆ ಬೇಕಾದ ಜಾಹೀರಾತನ್ನು ಪ್ರಕಾಶಕರೇ ಮಾಡುತ್ತರೆ ಹಾಗೂ ಇದರಿಂದ ಪುಸ್ತಕ ಪ್ರಕಟಿಸಿದ ಉದ್ದೇಶವೂ ಪೂರ್ಣವಾಗುತ್ತದೆ.

ಜಿ.ಬಿ. ಶಿವರಾಜು, ಗಾಂಧಿ ಭವನ, ಇವರು ಮಾತನಾಡುತ್ತ ಮೈಸೂರಿನಲ್ಲಿರುವ 'ಪ್ರಸಾರಂಗ'ದ ಮಾದರಿಯಲ್ಲಿ ಒಂದು ಪ್ರಕಟಣಾ ವಿಭಾಗವನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಬೇಕು, ಪ್ರಸಾರಂಗದ ಯಶಸ್ಸನ್ನು ನಮ್ಮ ವಿಶ್ವವಿದ್ಯಾಲಯವು ಕಾಣಬೇಕು ಎಂದು ಸಲಹೆ ನೀಡಿದರು.

ಕುಲಪತಿಗಳಾದ ಡಾ ವಿಷ್ಣುಕಾಂತ ಎಸ್ ಚಟಪಲ್ಲಿ, ಇವರು ಉತ್ತರಿಸುತ್ತ, ವಿಶ್ವವಿದ್ಯಾಲಯದ ಅಧಿನಿಯಮದ ಅನುಸಾರ ಈಗಾಗಲೇ ಪ್ರಕಟಣೆಗಾಗಿ ಒಂದು ಪ್ರತ್ಯೇಕ ವಿಭಾಗವೇ ಇದೆ. ಅದರಲ್ಲಿಯೇ ಗುಣಮಟ್ಟದ ಪ್ರಕಟಣೆಯ ಬಗ್ಗೆ ನಾವು ಒತ್ತು ನೀಡಬೇಕಾಗಿದೆ. ಸದರಿ ವಿಭಾಗಕ್ಕೆ ಒಂದು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಬೇಕಾದ ಅವಶ್ಯಕತೆ ಇದೆ ಎಂದು ತಿಳಿಸಿದಕ್ಕೆ ಸಭೆ ಒಪ್ಪಿಗೆ ನೀಡಿತು ಮತ್ತು ಸಂಬಂಧ ಪಟ್ಟ ಮಾರ್ಗಸೂಚಿಗಳನ್ನು ಕುಲಪತಿಗಳ ಹಂತದಲ್ಲಿ ರಚಿಸುವಂತೆ ತಿಳಿಸಿದರು.

ಮೇಲಿನ ಚರ್ಚೆಯೊಂದಿಗೆ, ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಅನುಮೋದಿಸಲು ನಿರ್ಧರಿಸಿದರು.

**ವಿಷಯ ಸಂಖ್ಯೆ 15 : ನಮ್ಮ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿಗಳಿಗಾಗಿ ಗದಗ-ಬೆಟಗೇರಿ ನಗರದ ಕೈಗಾರಿಕಾ ತರಬೇತಿ ಸಂಸ್ಥೆ ಆವರಣದಲ್ಲಿರುವ ಸಿಬ್ಬಂದಿ ವಸತಿ ಗೃಹಗಳನ್ನು ಪಿ.ಡಬ್ಲ್ಯೂ.ಡಿ ಯವರು ನಿರ್ಧರಿಸುವ ಬಾಡಿಗೆ ದರದಲ್ಲಿ ವಸತಿ ನಿಲಯವಾಗಿ ಉಪಯೋಗಿಸುವ ಕುರಿತು.**

**ಪರಾಮರ್ಷನ ಟಿಪ್ಪಣಿ:-**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಈಗಾಗಲೇ ಹತ್ತು ಕೋರ್ಸ್‌ಗಳನ್ನು ಪ್ರಾರಂಭಿಸಿದ್ದು, ಪ್ರಸ್ತುತ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯವು ಈಗಾಗಲೇ ಒಂದು ಮಹಿಳಾ ವಸತಿ ನಿಲಯ ಹೊಂದಿದ್ದು, ಇನ್ನೂ ಕೆಲವು ಮಹಿಳಾ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಅವಶ್ಯಕತೆ ಇರುತ್ತದೆ.

ಮುಂದುವರಿದು, ನಮ್ಮ ವಿಶ್ವವಿದ್ಯಾಲಯಕ್ಕೆ ಬಾಡಿಗೆ ಪಡೆದಿರುವ ಪ್ರಸ್ತುತ ಮಹಿಳಾ ವಸತಿ ನಿಯಲದ ಪಕ್ಕದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಕೆಲವು ಖಾಲಿಯಿರುವ ಸಿಬ್ಬಂದಿ ವಸತಿ ಗೃಹಗಳನ್ನು ನಮ್ಮ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿಗಳ ವಸತಿ ನಿಲಯವನ್ನಾಗಿ ಉಪಯೋಗಿಸಲು ಅನುಮತಿ ನೀಡಬೇಕಾಗಿ ವಿನಂತಿಸಿ, ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು, ಇವರಿಗೆ ದಿನಾಂಕ 30-11-2020ರಂದು ಪತ್ರ ಬರೆಯಲಾಗಿತ್ತು. ಇಲಾಖೆಯವರು ನಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿ, *ದಿನಾಂಕ 11-12-2020ರಂದು ಪತ್ರ ಸಂಖ್ಯೆ ಕೌಉಜೀಇ 64 ಕೈತಶಿ 2020* ಯೊಂದಿಗೆ ಈ ಕೆಳಗಿನಂತೆ ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಿ ಆದೇಶಿಸಿರುತ್ತಾರೆ.

ಗದಗ - ಬೆಟಗೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸ.ನಂ. 209/2+3ರಲ್ಲಿ ಖಾಲಿ ಇರುವ ವಸತಿ ಗೃಹಗಳನ್ನು ಸದ್ಬಳಕೆ ಮಾಡುವ ಸದುದ್ದೇಶದಿಂದ 08 ಸಿಬ್ಬಂದಿ ವಸತಿ ಗೃಹ ಹಾಗೂ 01 ಪ್ರಾಚಾರ್ಯರ ವಸತಿ ಗೃಹ ಸೇರಿದಂತೆ ಒಟ್ಟು 09 ವಸತಿ ಗೃಹಗಳನ್ನು ವಿಶ್ವವಿದ್ಯಾಲಯ ಮಹಿಳಾ ವಸತಿ ನಿಲಯಕ್ಕಾಗಿ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿದ ಬಾಡಿಗೆ ದರದಲ್ಲಿ ಉಪಯೋಗಿಸಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡಿದೆ.

**ಷರತ್ತುಗಳು**

1. ವಸತಿ ನಿಲಯದ ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಭರಿಸುವ ಜವಾಬ್ದಾರಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ್ದಾಗಿರುತ್ತದೆ.
2. ಬಾಡಿಗೆ ನಿಗದಿ ಮೌಲ್ಯಮಾಪನ ಶುಲ್ಕವನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಭರಿಸುವುದು.
3. ಬಾಡಿಗೆ ನಿಗದಿಯ ನಂತರ ಪ್ರಾಚಾರ್ಯರೊಂದಿಗೆ ಕರಾರು ಮಾಡಿಕೊಂಡು ಬಾಡಿಗೆ ಮೊತ್ತವನ್ನು ಇಲಾಖೆ ರೆವಿನ್ಯೂ ಲೆಕ್ಕಶೀರ್ಷಿಕೆಗೆ ಜಮಾ ಮಾಡುವುದು.
4. ಇಲಾಖೆಗೆ ಸದರಿ ವಸತಿ ಗೃಹಗಳ ಅವಶ್ಯಕತೆ ಇದ್ದಲ್ಲಿ, ವಸತಿ ಗೃಹಗಳನ್ನು ಸುಸ್ಥಿತಿಯಲ್ಲಿ ಹಿಂದಿರುಗಿಸುವುದು.

ಈ ಮೇಲಿನ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ::**

ಮೇಲಿನ ವಿಷಯದ ಬಗ್ಗೆ ಕುಲಪತಿಗಳು ಮಾತನಾಡುತ್ತ, ಸರ್ಕಾರದ ಪ್ರಾಧಾನ ಕಾರ್ಯದರ್ಶಿಗಳಾದ ಉಮಾ ಮಹಾದೇವನ್ ಅವರ ಆಶಯದಂತೆ ಪ್ರಸ್ತುತ ವರ್ಷದ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ ಪುರಷ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿದೆ. ಆದ ಕಾರಣ ಈಗಿರುವ ಮಹಿಳಾ ವಸತಿ ನಿಲಯ ಭರ್ತಿಯಾಗಿದ್ದು ಇನ್ನೂ ಕೆಲ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಅವಶ್ಯಕತೆ ಇದ್ದು, ಪ್ರಸ್ತುತ ಮಹಿಳಾ ವಸತಿ ನಿಲಯದ ಪಕ್ಕದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ಕೆಲವು ಖಾಲಿಯಿರುವ ಸಿಬ್ಬಂದಿ ವಸತಿ ಗೃಹಗಳನ್ನು ನಮ್ಮ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿಗಳ ವಸತಿ ನಿಲಯವನ್ನಾಗಿ ಉಪಯೋಗಿಸಲು ಸರ್ಕಾರ ಅನುಮತಿ ನೀಡಿದ್ದು, ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಇದರಿಂದ ವಿದ್ಯಾರ್ಥಿನಿಯರಿಗೆ ಹಾಗೂ ಪೋಷಕರಿಗೆ ಅನುಕೂಲವಾಗುವುದರಿಂದ ಈ ಕ್ರಮ ಅಗತ್ಯವಾಗಿ ತೆಗೆದುಕೊಳ್ಳಬಹುದು ಎಂದು ತಿಳಿಸಿ ಸದರಿ ವಿಷಯವನ್ನು ಅನುಮೋದಿಸಿತು. ಹಾಗೂ ಷರತ್ತು ಒಪ್ಪಿಕೊಂಡು ಪಿ.ಡಬ್ಲ್ಯೂ.ಡಿ ಯವರು ನಿಗದಿ ಪಡಿಸಿದ ದರದ ಪ್ರಕಾರ ಬಾಡಿಗೆ ಕೊಡಲು ತೀರ್ಮಾನಿಸಲಾಯಿತು.

ಮುಂದುವರೆದು ಮಾನ್ಯ ಕುಲಪತಿಗಳು ನಮ್ಮದು ಗ್ರಾಮೀಣ ವಿಶ್ವವಿದ್ಯಾಲಯವಾದ್ದರಿಂದ ಒಂದು ಕುಲಗೀತೆ ಅಥವಾ ಧ್ಯೇಯ ಗೀತೆ ಹೊಂದಬೇಕೆಂಬುದು ಎಲ್ಲಾ ಸದಸ್ಯರ ಆಶಯವಾಗಿದೆ. ಅದಕ್ಕೆ ಸೂಕ್ತ ಗೀತೆಯನ್ನು ಅಥವಾ ಹಾಡನ್ನು ಸೂಚಿಸಬೇಕೆಂದು ತಿಳಿಸಿದರು.

ಪ್ರೊ. ಆರ್. ಎಸ್. ದೇಶಪಾಂಡೆ ಮತ್ತು ಪ್ರೊ. ಪ್ರಕಾಶ್ ಭಟ್ ರವರು ಕನ್ನಡ ಆವೃತ್ತಿಯ "ಹಂ ಹೋಂಗೇ ಕಾಮಿಯಾಬ್" ಹಾಡನ್ನು ಸೂಚಿಸಿದರು.

ಪ್ರೊ. ಜಿ. ಬಿ. ಶಿವರಾಜು ರವರು ಜಯಂತ್ ಕಾಯ್ಕಿಣಿ ರವರು ಕನ್ನಡಕ್ಕೆ ಅನುವಾದ ಮಾಡಿದ "ವೈಷ್ಣವ ಜನತೋ" ಹಾಡು ಅಥವಾ ಕನ್ನಡ ಹಿರಿಯ ಸಾಹಿತಿಗಳಾದ ದೊಡ್ಡರಂಗೇಗೌಡ, ಜಿ. ಎಸ್. ಶಿವರುದ್ರಪ್ಪ ಮತ್ತು ಇತರರ ಸಾಹಿತಿಗಳು ಬರೆದ ಆಯ್ದ ಸಾಹಿತ್ಯವನ್ನು ಪರಿಗಣಿಸಬಹುದು ಎಂದು ಸೂಚಿಸಿದರು.

ಪ್ರೊ. ಟಿ. ವಿ. ಕಟ್ಟಿಮನಿ, ಕುಲಪತಿಗಳು, ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ವಿಜಯನಗರಂ ಇವರು ಮಾತನಾಡುತ್ತ ವಿಶ್ವವಿದ್ಯಾಲಯದ ದೃಷ್ಟಿ ಹಾಗೂ ಗುರಿಗೆ ಸೂಕ್ತವಾಗುವಂತಹ ಹಾಡನ್ನು ರಚಿಸಲು ಜಾಹೀರಾತು

ನೀಡಿ ಅದರಲ್ಲಿ ಸೂಕ್ತವಾದದನ್ನು ಆಡಳಿತ ಮಂಡಳಿ ಆಯ್ಕೆ ಮಾಡಬಹುದು. ಆಯ್ಕೆ ಮಾಡಿದ ಹಾಡಿಗಾಗಿ ಬಹುಮಾನವನ್ನು ನೀಡಬಹುದು.

ಅಂತ್ಯದಲ್ಲಿ ಕುಲಪತಿಗಳು ಕುಲಗೀತೆ ಆಯ್ಕೆಮಾಡುವ ಪ್ರಕ್ರಿಯೆಯನ್ನು ಮುಂಬರುವ ಆರು ತಿಂಗಳಲ್ಲಿ ಅಂತಿಮಗೊಳಿಸಲಾಗುವುದು. ಇದಕ್ಕೆ ಪ್ರತ್ಯೇಕವಾಗಿ ಡಾ. ಪ್ರಕಾಶ ಭಟ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ನಂತರ ಟೇಬಲ್ ಅಜೆಂಡಾ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡರು.

**ಟೆಬಲ್ ಅಜೆಂಡಾ 1: ದಿನಾಂಕ 27–11–2020 ರಂದು ಜರುಗಿದ 10ನೇ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ 27–11–2020 10ನೇ ಕಾಮಗಾರಿ ಸಮಿತಿ ಸಭೆಗಳ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಅವುಗಳು ಈ ಕೆಳಗಿನಂತಿವೆ.

1. ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್‌ನಲ್ಲಿ ಶಾಸನ ಬದ್ಧ ಅಧಿಕಾರಿಗಳ ವಸತಿ ಗೃಹಗಳ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲಾಗುತ್ತಿರುವ ಕುರಿತು ಸಭೆ ಗಮನಕ್ಕೆ ತಂದರು.
2. ಸದರಿ ವಸತಿ ಗೃಹಗಳ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ಕೊಡಲು ನಿರ್ಧರಿಸಲಾಯಿತು.
3. ಈಗಾಗಲೇ ತರಬೇತಿ ಕೇಂದ್ರದ ಕಟ್ಟಡ ಪ್ರಗತಿಯಲ್ಲಿದ್ದು, ಕರೋನ ಮಹಾಮಾರಿ ಸಾಂಕ್ರಾಮಿಕ ರೋಗದಿಂದ ಕಟ್ಟಡ ಕಾಮಗಾರಿಯನ್ನು ಮುಕ್ತಾಯಗೊಳಿಸಲು ವಿಳಂಬವಾಗಿರುದರಿಂದ, ಸದರಿ ಕಟ್ಟಡ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಆರು ತಿಂಗಳ ಹೆಚ್ಚಿನ ಸಮಯವನ್ನು ಅಂದರೆ 2021 ರ ಮಾರ್ಚ ಅಂತ್ಯದವರೆಗೆ ಪೂರ್ಣಗೊಳಿಸಲು ತಿಳಿಸಿಲಾಗಿರುವದಾಗಿ ವಿವರಿಸಿದರು.
4. ಶಾಲೆ ಕಟ್ಟಡ SB-1 ಮತ್ತು ಬಾಲಕರ ವಸತಿ ನಿಲಯ ಬ್ಲಾಕ್–1 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಹಾಮಾರಿ ಸಾಂಕ್ರಾಮಿಕ ರೋಗದಿಂದ ಸದರಿ ಕಟ್ಟಡ ಕಾಮಗಾರಿಗಳನ್ನು ಮುಕ್ತಾಯ ಗೊಳಿಸಲು ಆರು ತಿಂಗಳ ಹೆಚ್ಚಿನ ಸಮಯವನ್ನು ಅಂದರೆ 2021 ರ ಏಪ್ರೀಲ್ ಮೊದಲನೇಯ ವಾರದಲ್ಲಿ ಪೂರ್ಣ ಗೊಳಿಸಲು ತಿಳಿಸಿಲಾಗಿರುವದಾಗಿ ವಿವರಿಸಿದರು.
5. ಸಬರಮತಿ ಆಶ್ರಮದ ಪ್ರತಿ ಕೃತಿ ಕಟ್ಟಡದ ಕಾಮಗಾರಿಗೆ ಸಂಬಂಧಪಟ್ಟ Workslip ಮೊತ್ತ ರೂ. 2,34,190.15 ಹಾಗೂ EIRL (Extra Item rate list) ಮೊತ್ತ ರೂ. 6,49,890.00 ಗಳನ್ನು ಒಳಗೊಂಡು ಸಿದ್ಧಪಡಿಸಲಾದ ಪರಿಷ್ಕೃತ ಅಂದಾಜು ಪತ್ರಿಕೆಯ ಒಟ್ಟು ರೂ. 74,18,313.57 ಗಳ ಮೊತ್ತಕ್ಕೆ

ಸಮಿತಿಯು ಅನುಮೋದನೆಗೆ ಶಿಫಾರಸ್ಸು ಮಾಡಿತು. ಕಾಮಗಾರಿಯ ಅಂತಿಮ ಬಿಲ್‌ನ್ನು ತಯಾರಿಸಿ, ಬಿಲ್ ಮೊತ್ತವನ್ನು ಪಾವತಿಸಲು ಸಮಿತಿಯು ತಿಳಿಸಿಲಾಗಿರುವದಾಗಿ ವಿವರಿಸಿದರು.

6. ತರಬೇತಿ ಕೇಂದ್ರದ ಕಟ್ಟಡ ಕಾಮಗಾರಿಗೆ ಸಂಭಂಧಿಸಿದಂತೆ BOQ ನಲ್ಲಿರುವ ಕೆಲವು ಅಂಶಗಳ ಪ್ರಮಾಣವು ಶೇ 100 ರಿಂದ ಶೇ. 125 ರಷ್ಟು ಹೆಚ್ಚಿಗೆಯಾದ ಅಂಶಗಳ ಮೊತ್ತವನ್ನು ಗುತ್ತಿಗೆ ಒಪ್ಪಂದದ clause 35.1 of section (5) ಷರತ್ತಿನನ್ವಯ ಗುತ್ತಿಗೆದಾರನಿಗೆ ಹಣ ಪಾವತಿಸಲು / ಬಿಡುಗಡೆಗೊಳಿಸಲು ಸಮಿತಿಯು ಅನುಮೋದಿಸಿತು. ಈ ಮೇಲೆ ತಿಳಿಸಿದ ಕಾಮಗಾರಿಯ ಸಂಬಂಧಿಸಿದಂತೆ, ಮುಂದಿನ ಕಾಮಗಾರಿಯ ಸಮಿತಿಯ ಸಭೆಯಲ್ಲಿ Workslip ಹಾಗೂ EIRL (Extra Item rate list) ಗಳನ್ನೊಳಗೊಂಡ ಪರಿಷ್ಕೃತ ಅಂದಾಜು ಪತ್ರಿಕೆಯನ್ನು ಹಾಜರುಪಡಿಸಲು ಸಮಿತಿಯು ತಿಳಿಸಿಲಾಗಿರುವದಾಗಿ ವಿವರಿಸಿದರು.

7. ವಿಶ್ವವಿದ್ಯಾಲಯದ ನೂತನ ಆವರಣದ ಭೌಗೋಳಿಕ ಸ್ಥಿತಿ ಹಾಗೂ ಅವಶ್ಯಕತೆಯ ಅನುಗುಣವಾಗಿ ಮತ್ತು ಖರೀದಿಸಿದ ಜಮೀನಿನ ಲಭ್ಯತೆಯ ಆಧಾರದ ಮೇಲೆ, ಕಾಮಗಾರಿ ಸಮೀತಿಯು "Revised Master plan" ನ್ನು ಅನುಮೋದನೆಗೆ ಶಿಫಾರಸು ಮಾಡಿಲಾಗಿರುವ ವಿಷಯವನ್ನು ತಿಳಿಸಿದರು.

ಮೇಲಿನ ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ಚರ್ಚಿಸಿ ಕಾಮಗಾರಿ ಸಮಿತಿ ಸಭೆಗಳ ನಡವಳಿಗಳನ್ನು ಅನುಮೋದಿಸಲಾಯಿತು.

**ಟೆಬಲ್ ಅಜೆಂಡಾ 2: ವಿಶ್ವವಿದ್ಯಾಲಯಕ್ಕೆ ಮಂಜುರಾದ ಜಮೀನಿನ ಕುರಿತಂತೆ ದಿನಾಂಕ 10-12-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರ ಜೊತೆಗೆ ನಡೆದ ಸಭೆಯ ನಡಾವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

ದಿನಾಂಕ **10-12-2020** ರಂದು, ವಿಶ್ವವಿದ್ಯಾಲಯಕ್ಕೆ ಮಂಜುರಾದ ಜಮೀನಿನ ಕುರಿತಂತೆ ಮಾನ್ಯ ಜಿಲ್ಲಾಧಿಕಾರಿಗಳ ಜೊತೆ ನಡೆದ ಸಭೆಯ ನಡಾವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಟೇಬಲ್ ಅಜೆಂಡಾ 1 ಮತ್ತು 2ರ ವಿಷಯ ಹೋಲುವುದರಿಂದ ಎರಡನ್ನು ಒಟ್ಟಿಗೆ ಚರ್ಚಿಸಲಾಯಿತು.

ಮಾನ್ಯ ಕುಲಪತಿಗಳು ಮೇಲಿನ ವಿಷಯದ ಬಗ್ಗೆ ಮಾತನಾಡುತ್ತ ನಮ್ಮ ವಿಶ್ವವಿದ್ಯಾಲಯದ ಮಾಸ್ಟರ್ ಪ್ಲಾನನ್ನು ಬದಲಾಯಿಸಲಾಗಿದೆ, ಕೆಲವು ಕಟ್ಟಡಗಳ ಕಾಮಗಾರಿಗಳಿಗೆ ಸಮಯದ ವಿಸ್ತರಣೆ ಮಾಡಲಾಗಿದೆ ಹಾಗೂ ಕೆಲವು

ಕಾಮಗಾರಿಗಳಿಗೆ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ದಿನಾಂಕ 10-12-2020 ರಂದು ಗದುಗಿನ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿದ್ದು ವಿಶ್ವವಿದ್ಯಾಲಯಕ್ಕೆ ಬರಬೇಕಾದ ಭೂ ವರ್ಗಾವಣೆ ಹಾಗೂ ವಿಶ್ವವಿದ್ಯಾಲಯದ ಮುಖ್ಯ ಪ್ರವೇಶ ದ್ವಾರದ ಹತ್ತಿರ ಇರುವ 32 ಎಕರೆ ಜಮೀನನ್ನು ಹೆಚ್ಚುವರಿಯಾಗಿ ಖರೀದಿಸುವ ಕುರಿತು ಚರ್ಚಿಸಲಾಯಿತು.

ಮೇಲೆ ಹೇಳಿದ 32 ಎಕರೆ ಭೂಮಿ ವಿಶ್ವವಿದ್ಯಾಲಯದ ಮುಖ್ಯ ಪ್ರವೇಶ ದ್ವಾರದ ಬಳಿ ಇರುವುದರಿಂದ, ಇದು ವಾಣಿಜ್ಯ ವ್ಯಾಪಾರಿಗಳ ಪಾಲಾದರೆ ಅವರ ಕಟ್ಟಡಗಳಿಂದ ಹೊಟೇಲ್, ಅಂಗಡಿ ಮುಂಗಟ್ಟು ಇತ್ಯಾದಿಗಳಿಂದ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ವಿಶ್ವವಿದ್ಯಾಲಯದ ಮುಖ್ಯ ಪ್ರವೇಶ ದ್ವಾರದ ಸೌಂಧರ್ಯ ಕಡಿಮೆಯಾಗ ಬಹುದು. ಆದುದರಿಂದ ಈ 32 ಎಕರೆಯ ಬದಲಾಗಿ ಕಳಸಾಪೂರ ಗ್ರಾಮದ ಗಡಿಯ ಹತ್ತಿರವಿರುವ ಭೂಮಿಯನ್ನು ವಿನಿಮಯ ಮಾಡಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು. ವಿಶ್ವವಿದ್ಯಾಲಯಕ್ಕೆ ಮಂಜೂರದಾದ ಭೂಮಿಯಲ್ಲಿ ಮಧ್ಯ ಭಾಗದಲ್ಲಿರುವ 10 ಎಕರೆ ಭೂವರ್ಗಾವಣೆ ಬಗ್ಗೆಯು ಚರ್ಚಿಸಲಾಯಿತು.

ಪ್ರೊ. ಟಿ. ವಿ. ಕಟ್ಟಿಮನಿಯವರು ಮಾತನಾಡುತ್ತ, ಸದರಿ 32 ಎಕರೆ ಸರ್ಕಾರದಿಂದ ಪಡೆಯಬೇಕಾದರೆ ಅದು ಸುಮಾರು 6 ರಿಂದ 7 ತಿಂಗಳು ಸಮಯ ಬೇಕಾಗುತ್ತದೆ. ಆದ್ದರಿಂದ ನೇರವಾಗಿ ಜಿಲ್ಲಾಧಿಕಾರಿಗಳ ಸಮ್ಮುಖದೊಂದಿಗೆ ಮಾಲೀಕರೊಂದಿಗೆ ಚರ್ಚಿಸಿ ಒಂದು ದರವನ್ನು ನಿಗಿದಿಪಡಿಸಿ ಖರೀದಿಸದರೆ ಬೇಗ ಭೂ ವರ್ಗಾವಣೆಯನ್ನು ಮಾಡಬಹದು. ಭೂ ಖರೀದಿಗೆ ಒಪ್ಪಿಗೆಗೆ ಅನುಮೋದನೆ ಸಿಗದಿದ್ದಲ್ಲಿ , ಭೂಸ್ವಾಧೀನ ಪ್ರಕ್ರಿಯೆ ಜರುಗಿಸಲು ಸಂಬಂಧಪಟ್ಟವರಿಗೆ ಕೋರಿಕೊಳ್ಳಬಹುದಾಗಿದೆ ಎಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಶ್ರೀ. ಬಿ.ಜಿ. ಗೋವಿಂದಪ್ಪ ಅವರು ಜಮೀನು ಹಿಂದಿರುಗಿಸುವ ಬದಲು ಖರೀದಿ ಅಥವಾ ಭೂಸ್ವಾಧೀನ ಪಡೆಸಿಕೊಳ್ಳಬಹುದು ಎಂದು ತಿಳಿಸಿದರು. ಪ್ರೊ. ಆರ್. ಎಸ್. ದೇಶಪಾಂಡೆಯವರು ಮಾತನಾಡುತ್ತ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಅವರದೇ ಆದ ಕಲ್ಪನೆಗಳೊಂದಿಗೆ ವಿಶ್ವವಿದ್ಯಾಲಯದ ಮಾಸ್ಟರ್ ಪ್ಲಾನ್ ಅನ್ನು ವಿಶ್ವವಿದ್ಯಾಲಯದ ಒಳಿತಿಗಾಗಿ ಬದಲಾಯಿಸಿ, ಈಗಿರುವ ಭೂಪ್ರದೇಶದ ಗುಣಮಟ್ಟವನ್ನು ತೊಂದರೆಯಾಗದಂತೆ ಮಾಸ್ಟರ್ ಪ್ಲಾನ್ ಅನ್ನು ಬದಲಾಯಿಸಬಹದು. ದಿನಾಂಕ 10-12-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರ ಜೊತೆಗೆ ನಡೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಈ ಕೆಳಗಿನಂತಿದ್ದು,

- ವಿಶ್ವವಿದ್ಯಾಲಯಕ್ಕೆ ಜಿಲ್ಲಾಡಳಿತದಿಂದ ಖರೀದಿಸಿದ, ಹಾಗೂ ವರ್ಗಾವಣೆಗೊಂಡ ಜಮೀನಿನ ವಿವರದ ಕುರಿತು.
- ನಾಗಾವಿ ಗ್ರಾಮದ ವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯಕ್ಕೆ ಖರೀದಿಸಿದ ಮತ್ತು ಹಸ್ತಾಂತರಿಸಿದ ಜಮೀನಿನ ಗಡಿರೇಖೆ ಗುರುತಿಸುವ ಕುರಿತು ಕ್ರಮಕೈಗೊಳ್ಳುವುದು.
- ನಾಗಾವಿ ಗ್ರಾಮ ಸರ್ವೆ ನಂ -143 ರಲ್ಲಿ 10 ಎಕರೆ 35 ಗುಂಟೆ ಜಮೀನಿನ ಖರೀದಿ ಕುರಿತು ಅಗತ್ಯ ಕ್ರಮಕೈಗೋಳ್ಳುವುದು.
- ನಾಗಾವಿ ಗ್ರಾಮ ಸರ್ವೆ ನಂ -143 ರಲ್ಲಿ 38 ಎಕರೆ ಜಮೀನಿನ ಖರೀದಿ ಕುರಿತು ಕ್ರಮಕೈಗೊಳ್ಳುವುದು.
- ಗದಗ ತಾಲ್ಲೂಕಿನ ನಾಗಾವಿ ಗ್ರಾಮದ ವಿಶ್ವವಿದ್ಯಾಲಯದ ಮುಖ್ಯ ಪ್ರವೇಶ ದ್ವಾರದ ಹತ್ತಿರ ಇರುವ 32 ಎಕರೆ ಜಮೀನನ್ನು ಖರೀದಿ/ಸ್ವಾಧೀನಪಡಿಸಿಕೊಂಡು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಕುರಿತು ಕ್ರಮಕೈಗೊಳ್ಳುವುದು .
- ಗದಗ ತಾಲ್ಲೂಕಿನ ಕಳಸಾಪೂರ ಗ್ರಾಮದ 125 ಎಕರೆ ಜಮೀನಿನ ಗಡಿರೇಖೆ ಗುರುತಿಸುವ ಕುರಿತು.

ಮೇಲಿನ ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ಚರ್ಚಿಸಿ ವಿಶ್ವವಿದ್ಯಾಲಯಕ್ಕೆ ಮಂಜುರಾದ ಜಮೀನಿನ ಕುರಿತಂತೆ ದಿನಾಂಕ 10-12-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರ ಜೊತೆಗೆ ನಡೆದ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

**ಟೆಬಲ್ ಅಜೆಂಡಾ 3: ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದುಕೊಂಡು ಉತ್ತೀರ್ಣರಾದ ಹಾಗೂ ನಿರ್ಗಮಿಸುವ ವಿದ್ಯಾರ್ಥಿಗಳಿಗೆ ನೀಡುವ ವಲಸೆ (Migration Certificate) ಮತ್ತು ವರ್ಗಾವಣೆ (Transfer Certificate) ಪ್ರಮಾಣ ಪತ್ರಗಳಿಗೆ ನಿಗದಿಪಡಿಸಿದ ಶುಲ್ಕ ರಚನೆ ಅಧಿಸೂಚನೆಯ ವಿಷಯವನ್ನು ಪರಿಗಣಿಸುವ ಹಾಗೂ ಅನುಸಮರ್ಥನೆಗಾಗಿ.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದುಕೊಂಡು ಉತ್ತೀರ್ಣರಾದ ಹಾಗೂ ನಿರ್ಗಮಿಸುವ ವಿದ್ಯಾರ್ಥಿಗಳಿಗೆ ನೀಡುವ ವಲಸೆ (Migration Certificate) ಮತ್ತು ವರ್ಗಾವಣೆ (Transfer Certificate) ಪ್ರಮಾಣ ಪತ್ರಗಳಿಗೆ ವಿಶ್ವವಿದ್ಯಾಲಯದ ಅಧಿನಿಯಮ ಪ್ರಕರಣ 5(VII), ರನ್ವಯ, ಕುಲಪತಿಗಳು ಶುಲ್ಕ ರಚನೆ ಅಧಿಸೂಚನೆಯ ವಿಷಯಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿದಂತೆ ಹಾಗೂ K.S.R.D.P.R UNIVERSITY ORDINANCES GOVERNING THE ADMISSION OF STUDENTS TO THE VARIOUS COURSES, PAYMENT OF FEES, SCHOLARSHIP, CONDUCT AND RESIDENCE OF STUDENTS, 2019. ಗಳ ಪ್ರಕಾರ ಅಧಿಸೂಚಿಸಲಾಗಿರುತ್ತದೆ.

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಟೇಬಲ್ ಅಜೆಂಡಾದಲ್ಲಿ ಮಂಡಿಸಲಾಗಿದೆ.

:: ನಿರ್ಣಯ::

ಮಾನ್ಯ ಕುಲಸಚಿವರು ಸದರಿ ವಿಷಯದ ಬಗ್ಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಅನುಮೋದಿಸಿದರು.

**ಟೆಬಲ್ ಅಜೆಂಡಾ 4: ದಿನಾಂಕ 29-9-2020 ರಂದು ನಡೆದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಗೊಂಡಂತೆ,ವಿವಿಧ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ "ಒಡಂಬಡಿಕೆ ಜ್ಞಾಪನಾ ಪತ್ರ"ಗಳ ಮಾಹಿತಿ.**

**ಪರಾಮರ್ಶನ ಟಿಪ್ಪಣಿ:**

ಮುಂದುವರೆದು, ದಿನಾಂಕ 29-09-2020 ರಂದು ನಡೆದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಲ್ಲಿ ಸಂಶೋದನೆ, ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಸ್ಥೆಗಳೊಂದಿಗೆ "ಒಡಂಬಡಿಕೆ ಜ್ಞಾಪನಾ ಪತ್ರ"ಗಳನ್ನು (MoU) ಮಾಡಿಕೊಳ್ಳಲು ನಿರ್ಣಯಿಸಲಾಗಿರುತ್ತದೆ. ಅದರಂತೆ ಶೈಕ್ಷಣಿಕ ಪರಿಷತ್ತು ಅನುಮೋದನೆಗೊಂಡಂತೆ ಈ ಕೆಳಕಂಡ ಸಂಸ್ಥಗಳೊಂದಿಗೆ "ಒಡಂಬಡಿಕೆ ಜ್ಞಾಪನಾ ಪತ್ರ" ಕುರಿತಾದ ಮಾಹಿತಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಿದೆ.

1. **International Crops Research Institute for the Semi-Arid-Tropics (ICRISAT):** ಸದರಿ ಸಂಸ್ಥೆಯೊಂದಿಗೆ ದಿನಾಂಕ 09/11/2020 ರಂದು ಮಾಡಿಕೊಂಡಿರುವ ಒಡಂಬಡಿಕೆ ಜ್ಞಾಪನಾ ಪತ್ರ (MoU)ವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಿದೆ.

2. ***Mysore Resettlement and Development Agency (MYRADA):*** *ಶೈಕ್ಷಣಿಕ ಪರಿಷತ್ತಿನಲ್ಲಿ ಅನುಮೋದನೆಗೊಂಡ ಒಡಂಬಡಿಕೆ ಜ್ಞಾಪನ ಪತ್ರ (MoU)ವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಮಹಿತಿಗಾಗಿ ಮಂಡಿಸಿದೆ.*

ಮುಂದುವರೆದು ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ಇನ್ನು ವಿಸ್ತಾರಗೊಳಿಸುವ ನಿಟ್ಟಿನಲ್ಲಿ, ಈ ಕೆಳಕಂಡ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿವಧ ಶೈಕ್ಷಣಿಕ, ಸಂಶೋದನೆ, ತರಬೇತಿ, ವಿಸ್ತರಣಾ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿರುತ್ತದೆ.

1. CSIR : Council for Scientific and Industrial Research
2. GRAAM: Grassroots research and Advocacy Movement, Mysore.
3. UAS, Dharwad

:: ನಿರ್ಣಯ::

ಮಾನ್ಯ ಕುಲಸಚಿವರು ಸದರಿ ವಿಷಯದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಪ್ರಾರಂಭದ ದಿನಗಳಲ್ಲಿ ವಿವಿಧ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡರೆ ವಿಶ್ವವಿದ್ಯಾಲಯದ ಬೆಳವಣಿಗೆಗೆ ಸಹಾಯವಾಗುತ್ತದೆ, ಇದೊಂದು ಒಳ್ಳೆಯ ನಡೆ ಎಂದು ಪ್ರೊ. ಅರುಣ್ ಪಾಟೀಲರವರು ಅಭಿಪ್ರಾಯ ನೀಡಿದರು. ನಂತರ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಅನುಮೋದಿಸಿದರು.

**Table Agenda 5: Constitution of standing committee to advice on Research, Innovations and Evaluation activities which will be taken up by the University –reg.**

**Reference Note:** The regulations framed under Section 30 of the KSRDPRU University Act ,2016,*Viz., The Karnataka State Rural Development and Panchayat Raj, University ( Constitution of Standing Committee and Appointment of Ad-Hoc Committees ) Regulations ,2019, which have been approved by the Chancellor on 21-08-2019,* provide for constitution of standing Committee and appointment of ad-hoc committees by the Executive Council. The relevant portions of the of the Regulations are as under.

**3. ***Constitution of Committees. -(1) The Executive Council may, by resolution constitute such standing committee/s or appoint ad-hoc committees for such purposes and with such powers as the Executive Council may think fit for exercising any powers or discharging any function of the University or for enquiring into, reporting or advising upon matter relating to the University for such period as may be decided by the Executive Council.*

*(2) The Standing Committees ar Ad-Hoc Committees may be either One Man Committee headed by a retired Vice- Chancellor or Senior retired Government Officer with multiple members, with specialized knowledge related to Academic Administration, Training, Research, Law, Rural development, Panchayat Raj etc."*

The KSRDPRU has two Centres, one for Training , Publications and Supervision and the other for Research, Innovation and Evaluation. The main functions of the Centre for Research, Innovation and Evaluation are to

- Undertake Research Programs and Projects in the field of Rural Development and Panchayat Raj and other allied subjects with a view to promote effective co-ordination.
- Create Physical, fiscal and administrative facilities required for implementing research projects.
- Orienting research to meet the needs of the rural stakeholders, Integration of research, extension, teaching and participation of research workers in teaching and extension activities.
- Foster and co-ordinate public, private and rural community partnership in research through pure, applied and participatory research and develop eco-friendly technologies.
- Develop Integrated energy modules (electrical, wood, wind, biogas, biomass, solar) and systems for efficient utilization and attain self sufficiency
- Create research opportunity for evaluating and commercialization of ethnic, cultural heritage, traditional knowledge, skill and wisdom existing in rural communities and passing on the economic benefit to innovators and stake holders.

- Evolve policies and promote practices to improve agriculture productivity through adoption of judicious natural resource management technology and to generate higher income through integrated farming system approach,
- Enabling policies for rural infrastructure, agro and non-agro based industries, entrepreneurship development, and market linkages-leading to employment and wealth creation and avoiding migration to cities.

There is a need to constitute a Standing Committee to advise the University from time to time on carrying out the above functions. It is therefore proposed to constitute a Standing Committee for the Purpose comprising a panel of Expertsand authorise the Vice Chancellor to nominate the members of the Standing Committee as per the guidelines provided under regulations framed under Section 30 of the KSRDPRU University Act, 2016, Viz., *The Karnataka State Rural Development and Panchayat Raj, University ( Constitution of Standing Committee and Appointment of Ad-Hoc Committees ) Regulations ,2019.*

The matter is placed before the Executive Council for consideration and approval.

:: ನಿರ್ಣಯ::

ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರದ ಚಟುವಟಿಕೆಗಳನ್ನು ಸಹಾಯಕ ನಿರ್ದೇಶಕರಾದ ಡಾ. ಗಿರೀಶ್ ದೀಕ್ಷಿತ್ ರವರ ನೇಮಕವಾದ ಮೇಲೆ ಪ್ರಾರಂಭವಾಯಿತು. ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರಕ್ಕೆ ಸ್ಥಾಯಿ ಸಮಿತಿ ರಚಿಸದ ಹಾಗೆಯೇ ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರಕ್ಕೂ ಸ್ಥಾಯಿ ಸಮಿತಿ ರಚನೆ ಮಾಡುವ ಅವಶ್ಯಕತೆ ಇದೆ ಎಂದು ಮಾನ್ಯ ಕುಲಪತಿಗಳು ಸಭೆಯ ಸದಸ್ಯರಿಗೆ ತಿಳಿಸಿದರು.
ಪ್ರೊ. ಆರ್. ಎಸ್. ದೇಶಪಾಂಡೆಯವರು ಮೇಲಿನ ವಿಷಯದ ಬಗ್ಗೆ ಮಾತನಾಡುತ್ತ ಸದರಿ ಸ್ಥಾಯಿ ಸಮಿತಿಯು ಸಾಮಾನ್ಯ ಸಭೆ ನಡೆಸುವ ಹೊರತಾಗಿ ಅನ್ವೇಷಣೆಯ ಬಗ್ಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು ಮತ್ತು ಮಾಡುವ ಸಂಶೋಧನೆ ಮತ್ತು ಅನ್ವೇಷಣೆ ಸಾಮಾನ್ಯ ಜನರಿಗೆ ತಲುಪುವಂತಾಗಬೇಕು.
ಮೇಲಿನ ಚರ್ಚೆಯೊಂದಿಗೆ ಸದರಿ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಅನುಮೋದಿಸಿದರು.

**Table Agenda 6: Budget for Logistics and support to Centre for Research, Innovation and Evaluation.**

**Reference Note:** Centre for Research, Innovation and Evaluation of KSRDPRU undertakes programmes which involves sourcing the services of Subject matter specialists, Experts, Researchers and Scientists etc to advise, guide, support various activities of the Centre. Also the centre needs to involve various stake

holders like in their initiatives. Budgetary provisions for logistics and support has to be provided for facilitating these activities.

The Executive Council in its third meeting held on 05/11/2019 has passed resolution on subject No.12 for making budgetary provisions for similar activities to the Centre for Training, Publications and Supervision and pursuant to this resolution Notification bearing No.RDPRU 2 CTP 2019 dated 18/11/2019 has been issued copy of which is attached herewith.

It is hereby proposed that the budgetary provisions made to Centre for Training, Publications and Supervision may also be made applicable to Centre for Research, Innovation and Evaluation.

Matter is placed before the Executive Council meeting for consideration and approval.

:: ನಿರ್ಣಯ::

ಮಾನ್ಯ ಕುಲಸಚಿವರು ಸದರಿ ವಿಷಯದ ಬಗ್ಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಮಾನ್ಯ ಕುಲಪತಿಗಳ ಹಂತದಲ್ಲಿ ಸೂಕ್ತ ಕ್ರಮ ಮತ್ತು ತರಬೇತಿ, ಪ್ರಕಟಣೆ ಮತ್ತು ಮೇಲ್ವಚಾರಣೆ ವಿಭಾಗಕ್ಕೆ ಅಧಿಸೂಚಿಸಲಾಗಿರುವ ದರಗಳನ್ನು ಸಂಶೋದನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರಕ್ಕೆ ಯಥಾವತ್ತಾಗಿ ಜಾರಿಗೊಳಿಸಬಹುದು ಎಂದು ಸಹಮತಿ ನೀಡಿದರು.

**Table Agenda 7: Information about KSRDPR University Sports Flag Designed for participate in the All India Inter-University Competitions and to conduct sports activities in the KSRDPR University and other selected activities.**

**Reference Note:**

In order to conduct the sports activities in the University, it was necessary to have a KSRDPR University Sports Flag. Keeping this in view, the Vice Chancellor was constituted a Sub Committee with vide Notification dated 20th October, 2020 to formulate a KSRDPR University Sports Flag. The Sub Committee consisted of the following:

1. Dr. Basavaraj L Lakkannavar
   Registrar, KSRDPRU, Gadag ...Chairman
2. Shri Rajukumar Jaxin Bagade,
   International Repute Sports Person, (Hockey)
   Native from Gadag district,
   Presently stationed at Mumbai ... Member
3. Shri. B B Vishwanath

District Youth and Sports Department Officer,
Gadag District, Gadag. ... Member

4. Dr. Khalid Khan
   Director, Physical Education,
   Karnataka State Law University,
   Navanagar, Hubli. ... Member

5. Dr. Veereshkumar B. Vijapur
   Asst. Director, Physical Education and Sports,
   KSRDPR University, Gadag ...Member-Secretary

The Sub Committee meeting was held on 02nd November, 2020, through 'Zoom' meeting application and submitted a KSRDPR University Sports Flag for smooth conduct of Sports and Games in the University. The framed KSRDPR University Sports Flag was placed *(a copy of Sports Policy and Guidelines is enclosed herewith separately).*

With this information, the KSRDPR University Sports Flag as suggested from the members of Sub Committee is placed before the Executive Council for kind information.

:: ನಿರ್ಣಯ::

ಮಾನ್ಯ ಕುಲಪತಿಗಳು ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅವಗಾಹನೆ ಮತ್ತು ಅನುಸಮರ್ಥನೆಗಾಗಿ ಟೇಬಲ್ ಅಜೆಂಡಾದಲ್ಲಿ ಮಂಡಿಸಲಾಗುತ್ತಿದೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ಕ್ರೀಡಾ ಮತ್ತು ದೈಹಿಕ ವಿಭಾಗದ ಸಹಾಯಕ ನಿರ್ದೇಶಕರಿಗೆ ವಿಶ್ವವಿದ್ಯಾಲಯದ ಕ್ರೀಡಾ ಧ್ವಜದ ರೂಪುರೇಶೆ ಸಿದ್ಧಪಡಿಸಲು ತೆಗೆದುಕೊಂಡ ಕ್ರಮದ ಬಗ್ಗೆ ಸಭೆಯ ಸದಸ್ಯರಿಗೆ ವಿವರಿಸಿದರು. ನಂತರ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಅನುಮೋದಿಸಿದರು.

ಕುಲಸಚಿವರು ಕುಲಪತಿಗಳು